ಅರೆಬಾಸೆ

ಮುದ್ಪು

ನಿರ್ನಾಲ್ ಮತ್ತೆ ಬೆಳ್ತಿಂಗ

ಸಂಪುಟ–2 ಸಂಚಿಕೆ–4



ತಿಂಗ ಪತ್ರಿಕೆ

ವಿನೋದ್ ಮೂಡಗದ್ದೆ ಸಾರಥ್ಯಲಿ

ಚಂದಾದಾರಲ್ಲಿ ಒಂದು ಮನವಿ:

ನಮ್ಮ ಈ ಅರೆಬಾಸೆ ಮುಡ್ಪು ಪತ್ರಿಕೆ ಒಂದು ವರ್ಷನ ಪೂರ್ೈಸುಟು. ಹವಲಾರ್ ಜನ ಚಂದ ಹಣದೊಟ್ಟಿಗೆ ದೇಣಿಗೆನ ಸ ನೀಡಿ ಸಹಕರಿಸಿಯೊಳೊ. ಇನ್ನು ಸಾಕಷ್ಟ್ ಜನ ಚಂದಾರರ್ ಚಂದಾ ಹಣ ಕೊಡಿಕೆ ಬಾಕಿ ಒಳೊ. ಕೆಲವ್ ಫೋನಾಯಿಸಿ ಎಲ್ಲಿ ಹೆಂಗೆ ಕೊಡಕು ತ ಸ ವಿಚಾರಿಸಿಯೊಳೊ. ಈ ಕೆಳಗೆ ನಮ್ಮೊಟ್ಟಿಗೆ ಈ ಪತ್ರಿಕೆನ ಏಳಿಗೆಗೆ ಸಹಕರಿಸಿದ.. ಸಹಕರಿಸ್ತಾ ಇರ್ವ ಕೆಲವ್ ಜನರ ಹೆಸರ್ ಹಂಗೆ ದೂರವಾಣಿ ಸಂಖ್ಯೆಗ ಉಟ್ಟು. ನಿಮ್ಮ ಹಣನ ಅವರತ್ರ ತಲ್ಪಿಸಿರೂ ಆದೆ. ನಿಮ್ಮೆಲ್ಲರ ಪ್ರೋತ್ಸಾಹ ಸದಾ ಹಿಂಗೇ ಇರ್ಲಿ. ಹಂಗೆನೆ ಮುಂದಿನ ವರ್ಷದ ಚಂದಾ ನೀಡವು ಸ ಇವರ್ನ ಸಂಪರ್ಕಿಸಕ್.

ಕೊಂಪುಳಿ ಇಂದಿರ	ಮರಗೋಡು	9448300755
ಚೀಯಪ್ಪನ ಜಲಜಾಕ್ಷಿ	ಮೂರ್ನಾಡು	9980030582
ಮೇರ್‌ಕಜೆ ಲೋಹಿತ್	ಮೂರ್ನಾಡು	9980777704
ಚೀಯಪ್ಪನ ನವೀನ್	ಬೆಂಗಳೂರು	8884571075
ಕೊಂಬಂಡ ಭೀಮಯ್ಯ	ಮೈಸೂರು	9741533567
ಅಮೆಮನೆ ಪಾಲಾಕ್ಷ	ಮಡಿಕೇರಿ	9449767424

ಇಲ್ಲೆ ತೇಲ್ರೆ ನೇರ ಬ್ಯಾಂಕ್ ಖಾತೆಗೆ ಸ ಜಮಾ ಮಾಡಕ್

ಹೆಸರ್: Vinodh M.N

ಖಾತೆ ಸಂಖ್ಯೆ: 036001532462

ಬ್ಯಾಂಕ್: ICICI Bank

ಶಾಖೆ: Electronic City

ಐ.ಎಫ್.ಸಿ ಕೋಡ್ : ICIC0000360

Paytm: 9535615759



ಪ್ರಕೃತಿ ವಿಕೋಪದ ಒಂದು ದೃಶ್ಯ

ಮುದ್ರಕರು : **ನೇಹಾ ಕ್ರಿಯೇಷನ್ಸ್**, ಬನಶಂಕರಿ 2ನೇ ಹಂತ, ಬೆಂಗಳೂರು-70.
ಕೂಡಕಂಡಿರ ತಮ್ಮಯ್ಯ, 98453 19878, 080-26710552

ಸಂಪಾದಕೀಯ ಮಂಡಳಿ
ಪ್ರಧಾನ ಸಂಪಾದಕ:
ವಿನೋದ್ ಮೂಡಗದ್ದೆ

ಸಂಪಾದಕ ಮಂಡಳಿ:
ಅಮೆಮನೆ ಪಾಲಾಕ್ಷ
ಕೊಂಬಂಡ ಜೀವನ್

ಸಂಪಾದಕೀಯ

ಸುರುಗೇ ಎಲ್ಲವ್ಕೂ ಕೈ ಮುಗ್ದ್ ಕ್ಷಮೆ ಕೇಳಿನೆ. ಈ ಸಂಚಿಕೆನ ನೀವ್ಗೆ ತಲ್ಪಿಸಿಕೆ ತಡ ಆದಕೆ. ಕೊಡಗ್‌ಲಿ ಆದ ಪ್ರಕೃತಿ ವಿಕೋಪಂದ ಕಳ್ದ ಸಲದ ಸಂಚಿಕೆನ ತಾಕೆ ಆತ್ಲೆ.

ಎಲ್ಲವೂ ಕ್ಷೇಮ ತ ಭಾವಿಸಿನೆ. ಕತ್ತಲಾಗಿ ಬೊಳ್ಪಾಕನ ನಡ್ದ ಆ ಘಟನೆ ಇನ್ನೂ ಯಾರ ಮನ್ಸ್‌ಂದನೂ ಮಾಸಿತ್ಲೆ ತೇಳ್ದು ಗೊತ್ತು. ಇದರ್ಲಿ ನಮ್ಮವೂ ಸೇರ್ದಂಗೆ ಹಲವಾರ್ ಜನ ಇಂದ್ ಸಂಕಷ್ಟಲಿ ಒಳೊ. ಎಲ್ಲವೂ ನಮ್ಮವೇ, ನಮ್ಮ ಮನೆವೇ ತೇಳ್ವಂಗೆ ನೀವೆಲ್ಲರೂ ಕೈಲಾದ ಸಹಾಯ ಮಾಡಿ ಅವ್ಕೆ ಸಾಂತ್ವಾನ ಹೇಳೊಳ್ರಿ. ಅದರ್ಲೂ ಸಂತ್ರಸ್ತರ್‌ಗೆ ಬಂದ ಪರಿಹಾರ ಸಾಮಗ್ರಿಗ ಕಂಡವರ ಪಾಲಾದ್ ದುರಾದೃಷ್ಟನೇ ಸರಿ. ಆದಷ್ಟ್ ಬೇಗ ಅವರುಗಳ ಜೀವನ ಮತ್ತೆ ಹದಾ ಆಗಲಿ.

ಇಂತಹ ಸಂದರ್ಭಲಿ ಹಲವಾರ್ ಯುವಕರ್ ಒಟ್ಟ್ ಸೇರಿ ಎಲ್ಲರೂ ಮೆಚ್ಚುವಂತ ಕೆಲ್ಸ ಮಾಡೊಳೊ. ಸಂಕಷ್ಟಲಿ ಇದ್ದವರ ನೆರವಿಗೆ ಧಾವಿಸೊಳೊ. ಹಗಲ್ ಇರುಳು ತೇಳದೆ. ಬೇರೆ ಯಾರಿಗೂ ಕಾದು ಕುದ್ರದೆ. ತಮ್ಮ ಶಕ್ತಿ ಮೀರಿ ಹಲವಾರ್ ಜೀವಗಳ ಉಳ್ಸುವಲ್ಲಿ ಯಶಸ್ವಿ ಆಗೊಳೊ. ಜಿಲ್ಲಾಡಳಿತ ಸ ಉತ್ತಮ ಸ್ಪಂದನೆನ ಕೊಟ್ಟುಟು.

ಒಂದು ಕಡೆ ಪ್ರಕೃತಿ ವಿಕೋಪ, ಇನ್ನೊಂದ್ ಕಡೆ ಹವಮಾನ ಏರ್‌ಪೇರ್‌ಂದ ರೈತರ್ ಸ ಕಷ್ಟಲಿ ಒಳೊ. ಅರೆಬಿ ಕಾಫಿ ಹಣ್ಣಾಗಿ ಕೊಯ್ಯಕೆ ಸುರು ಮಾಡೊಳೊ. ಆದರೆ ಈ ವರ್ಷ ನೆನ್ಸದಂಗೆ ಫಸಲ್ ಇಲ್ಲೆ. ಮುಂದೆ ಏನ್ ತ ಹೇಳೋ ಚಿಂತೆ ಸುರು ಆವ್ಟು. ಈ ಸಲ ಆದರ್ ಸರಿ ಸಮೆಗೆ ಮಳೆ ಬಂದರೆ ಏನಾರ್ ಆದು. ಹಂಗೆ ಗದ್ದೆಲಿ ಬೆಳೆ ಹಣ್ಣಾಕಂಡ್ ಉಟ್ಟು. ನವೆಂಬರ್ 23 ರಂದ್ ಹುತ್ತರಿ ಹಬ್ಬ ತ ಗೊತ್ತಾವ್ಟು. ಎಲ್ಲವೂ ಹಬ್ಬದ ಗೌಜಿಲಿ ಒಳ್ರಿ. ದೂರದ ಊರ್‌ಂದ ಬಾವ ನೆಂಟ್ರ್‌ಗಳ ಕಾದ್‌ಕಂಡ್.

ಅಂದ್ ನಡ್ದ ಪ್ರಕೃತಿ ವಿಕೋಪಂದ ಇಂದ್ ಕೊಡಗ್‌ನ ಪ್ರವಾಸೋದ್ಯಮ ಹಂಞ ಕಮ್ಮಿ ಆವ್ಟು.

ನಮ್ಮ ಹತ್ತು ಕುಟುಂಬ ಹದಿನೆಂಟ್ ಗೋತ್ರದ ಯುವ ಪ್ರತಿಭೆಗ ಇಂದ್ ಬೇರೆ ಬೇರೆ ಕ್ಷೇತ್ರಗಳ್ಲಿ ಗಮನೀಯ ಸಾಧನೆಗಳ ಮಾಡ್ತಾ ಒಳೊ. ಇನ್ನ್ ಹೆಚ್ಚಿನವ್ ಸಾಧೆನನ ಹಾದಿಲಿ ಒಳೊ. ನಿಮ್ಮ ನೆರೆ ಕರೆ ಲಿ ಯಾರಾರ್ ಇದ್ದರೆ ಅವ್ಕೆ ಸೂಕ್ತ ಸಲಹೆ ಸೂಚನೆ ಪ್ರೋತ್ಸಾಹ ಕೊಡಿ. ಇನ್ನಷ್ಟ್ ಸಾದನೆ ಮಾಡಲಿ.

ಕಥೆ, ಕವನ, ಲೇಖಗಳ ಈ ಸಂಚಿಕೆನ ನಿಮ್ಮ ಮುಂದೆ ಇಸ್ತಾ ಒಳೆ. ಅದೇ ಪ್ರೀತಿ ವಿಶ್ವಾಸಂದ ಸ್ವೀಕರ್ರಿ. ಏನಾದರ್ ಸಲಹೆ ಸೂಚನೆಗ ಇದ್ದರೆ ತಪ್ಪದೇ ನಂಗೇ ನೇರ ತಿಳ್ಸಿ. ಮತ್ತೆ ಮುಂದಿನ ಸಂಚಿಕೆಲಿ ಕಾಂಬನೋ.

ಇಂತಿ ನಿಮ್ಮ ಪ್ರೀತಿಯ

ವಿನೋದ್

ಮಾತ್ ಒಂದ್! ಅರ್ಥ ಎಷ್ಟೋಂದ್!!

–ಹೊಳೆಕೆರೆ. ಆರ್. ಚೆಂಗಪ್ಪ

ಗುರು ವ್ಯಾಸರಾಯರ್ ತನ್ನ ಶಿಷ್ಯರ್‌ನ ಕೇಳ್ವೆ – ನಮ್ಮಲ್ಲಿ ಯಾರ್ ಮೋಕ್ಷಕ್ಕೆ ಹೋಗುವೋಂತ? **ನಾನು** ಹೋದರೆ ಹೋದೆನೂಂತ ಕನಕದಾಸರ್ ಉತ್ತರ ಹೇಳ್ವೆ. ಈ ಉತ್ತರನ ಕೇಳಿ, ಗುರುನ ಬುಟ್ಟು ಬೇರೆಯವ್ಕೆಲ್ಲ ಕನಕದಾಸರ ಮೇಲೆ ಸಿಟ್ಟು ಬಂದದೆ. ಗುರುಗೆ ಆ ಮಾತ್‌ದ್ ಗೂಢಾರ್ಥ ಗೊತ್ತಿದ್ದರೂ ಕನಕದಾಸರ ಬಾಯಿಂದ ಬರ್ಲಿಂತ ಅವರ ಹತ್ರ ವಿವರಣೆ ಕೇಳ್ವೆ. ನಾನು ತೇಳಿರೆ **ಅಹಂಕಾರ,** ಈ ಅಹಂಕಾರ ಹೋದರೆ ಮಾತ್ರ ಮೋಕ್ಷಕ್ಕೆ ಹೋಕೆ ಆದೆಂತ ಕನಕದಾಸರ್ ತನ್ನ ಮಾತ್‌ದ್ ಅರ್ಥನ ತಿಳಿಸುವೆ!!

ಕುರುಕ್ಷೇತ್ರ ಯುದ್ದಲಿ ಪಾಂಡವರ ಸೈನ್ಯ, ಕೌರವರ ಸೈನ್ಯ ಒಂದೊಂದ್ ಬರಿಲಿ ನಿತ್ತಿದ್ದವೆ. ದುರ್ಯೋದನ ತನ್ನ ಪರ ಯುದ್ದ ಮಾಡಿಕೆ ನಿತ್ತ ದ್ರೋಣಾಚಾರ್ಯರ್ಂಗೆ ಪಾಂಡವರ ಸೈನ್ಯಲಿ ಯಾರ್ ಯಾರ್ ಒಳೋಂತ ಪರಿಚಯ ಮಾಡಿಕೊಡುತ್ತಾ ಇದ್ದದೆ. ಪಾಂಡವರ ಸೈನ್ಯದ್ ಮುಖ್ಯಸ್ಥ ದೃಷ್ಟದ್ಯುಮ್ನ ಆಗಿದ್ದದೆ. ದೃಷ್ಟದ್ಯುಮ್ನನ ಅಪ್ಪ ದ್ರುಪದ – ಪಾಂಚಾಲ ದೇಶದ ರಾಜ. ದ್ರುಪದ ಮತ್ತೆ ದ್ರೋಣಾ ಇಬ್ಬರೂ ಭಾರದ್ವಾಜ ಮುನಿದ್ ಗುರುಕುಲಲಿ ಒಟ್ಟಿಗೆ ಓದಿದ್ದವೆ. ಇಬ್ಬರೂ ಪ್ರಾಣ ಸ್ನೇಹಿತಂಗ. ಓದ್ ಮುಗ್ಸಿದ ಮೇಲೆ ಅರ್ದ ರಾಜ್ಯನ ಕೊಟ್ಟನೇಂತ ದ್ರುಪದ ದ್ರೋಣಂಗೆ ಮಾತ್ ಕೊಟ್ಟಂವ, ರಾಜ ಆದ ಮೇಲೆ ದ್ರೋಣಂಗೆ ಕೈ ಕೊಟ್ಟದೆ! ದ್ರೋಣಾಚಾರ್ಯರ್ಂಗೆ ದ್ರುಪದನ ಮೇಲೆ ತುಂಬಾ ಸಿಟ್ಟ್ ಇದ್ದದೆ. ದುರ್ಯೋದನ ದೃಷ್ಟದ್ಯುಮ್ನನ ಬರೀ ದೃಷ್ಟದ್ಯುಮ್ನಂತ ಪರಿಚಯ ಮಾಡುವ ಬದ್ಲ್ ದ್ರೋಣಾಚಾರಿಗೆ ಅಂವನ ಮೇಲೆ ಸಿಟ್ಟ್ ಬರ್ಲಿಂತೇಳಿ – ನಿನ್ನ ವೈರಿ **ದ್ರುಪದನ** ಮಂಜ ದೃಷ್ಟದ್ಯುಮ್ನಂತ ಪೂರ್ವಾಗ್ರಹ ದೋಷಂದ **ದ್ರುಪದನ ಹೆಸ್ರ್‌ನ** ಒತ್ತಿ ಹೇಳ್ದೆ!!

ಮಾತ್ ಹುಟ್ಟುದು ಮನ್ಸುದು ಆಲೋಚನೆಂದ. ಆಲೋಚನೆಗ ಸದ್ದ್ ಆಗಿ ಬಾಯಿಂದ ಹೊರಗೆ ಬಾಕನ ಮಾತ್ ಆದೆ. ಮನ್ಸುದು ಆಲೋಚನೆನ ಮಾತ್‌ಲಿ ಹೇಳಿಕನ ಒಂದೊಂದ್ ಸಲ ಸೀದ ಆಗಿ ಹೇಳುವೆ. ಒಂದೊಂದ್ ಸಲ ಕನಕದಾಸರ ತರ ಗೂಢಾರ್ಥಲಿ ಹೇಳುವೆ. ಮತ್ತೆ ಒಂದೊಂದ್ ಸಲ ದುರ್ಯೋದನತರ ಪೂರ್ವಾಗ್ರಹ ದೋಷಲಿ ಹೇಳುವೆ.

ಆಡುವ ಮಾತ್‌ನ ಸರಿಯಾಗಿ ನಾಕ್ ಸಲ ಅಲೋಚನೆ ಮಾಡಿ ಜನಕ್ಕೆ ಅರ್ಥ ಆಗುವಂಗೆ ಮಾತಾಡೋಕ್ಕಾದೆ. ಈ ಸಂಗತಿ ನಂಗೆ ಗೊತ್ತಾದ್ ನಾನ್ ಲೇಖನ ಬರೆಯಕನ! ನಾನೇ ಬರ್ದ ವಾಕ್ಯನ ಓದುಗರ ಸ್ಥಾನಲಿ ನಿತ್ತ್‌ಕಂಡ್ ಓದಿರೆ ನಂಗೇ ಬೇರೆ ಬೇರೆ ಅರ್ಥ ಸಿಕ್ಕಿದೆ! ಬರವಣಿಗೆಲಿ ಒಂದ್ ಮಾತ್‌ನ ಎಲ್ಲವ್ಕೂ ಅರ್ಥವಾಗುವಂಗೆ ತಿದ್ದಿ ಸರಿ ಮಾಡಿಕೆ ಅವಕಾಸ ಉಟ್ಟು. ಅದೇ ನಾಕ್ ಜನ ಜೊತೆ ಮಾತಾಡಿಕನ ಒಂದ್ ಸಲ ಮಾತಾಡಿರೆ ಹೋತ್. ಹೇಳುವ ಸಂಗತಿನ ಸರಿಯಾಗಿ ಹೇಳದೆ ಇದ್ದರೆ ಇಲ್ಲಿ ತಿದ್ದಿಕೆ ಅವಕಾಸ ಇಲ್ಲೆ. ಮಾತಾಡಿಕೆ ಇನ್ನೊಂದ್ ಅವಕಾಸ ಕೊಟ್ಟು ವಿವರಣೆ ಕೇಳುವಷ್ಟು ಜನಕ್ಕೆ ಪುರುಸೊತ್ತ್ ಇರ್ದುಲ್ಲೆ.

ಆಡುವ ಮಾತ್‌ನ ಸರಿಯಾಗಿ ಆಡಿರೂ ಅವರವರ ಬುದಿವಂತಿಕೆಗೆ ಸರಿಯಾಗಿ ಒಬ್ಬೊಬ್ಬ ಒಂದೊಂದ್ ತರ ಅರ್ಥ ಮಾಡಿಕಂಡವೆ! ಹೇಳುವವರ ತರ ಕೇಳುವವರ ಪೈಕಿ ಕೆಲವು ಸಾಮಾನ್ಯ ಬುದ್ದಿವಂತಿಕೆ ಇರವ್, ಕೆಲವ್ ಅತೀ ಬುದ್ದಿವಂತಿಕೆ ಇರವ್ ಇದ್ದವೆ. ಸರಿಯಾಗಿ ಅರ್ಥಮಾಡಿಕಣದೆ ಸಾಮಾನ್ಯ ಬುದ್ದಿವಂತಿಕೆ ಇರವ್ ಒಳಗೊಳಗೇ ಬೇಜರ ಮಾಡಿಕಂಡರೆ, ಜಗಳಗಂಟರ್ ತಮ್ಮ ಅತೀ ಬುದ್ದಿವಂತಿಕೆಂದ ಜಗಳಕ್ಕೇ ಹೋಗಿ ಬುಟ್ಟವೆ! ಪೂರ್ವಾಗ್ರಹ ದೋಷಂದ ಒಂದೊಂದ್ ಮಾತ್‌ಗಂತೂ ಆಣೆ ಪ್ರಮಾಣ ಮಾಡುವ ಮುಟ್ಟ ಮುಟ್ಟಿದೆ!!

ಕಡೇ ಉಸ್‌ರು

–ಹೊಸೊಳಿಕೆ ಯೋಗೀಶ್

ಕಾಗಡೆ ಮನೆ ಬೊಳ್ಳು ನಾಯಿನ ಪಾಂಗ್
ಹಂತಿ ಮಣೆಲ್ಲಿ ಕುದ್ದ ನನ್ನ ಕೆಬಿಗೆ ಹೊಕ್ಕಿತ್ತ್
ಮೊಂದಿರಿಲಿ ಮಲ್ಗಿದ್ದ ನಮ್ಮಮ್ಮನ ಮೈ
ಬಿಪಿ,ವಾತ, ಸಕ್ಕರೆಲಿ ತುಂಬಿ ಮೊಗೆತಿತ್ತ್
ಮಲಗಿದ್ದಲೇ ಮಸುಗುತ್ತಿದ್ದ ಅವು
ಅಣ್ಣಾ.....ಅಕ್ಕಾ.... ನೀರ್ ಕೊಡಿನೆ
ಈ ಮಾತು ಕೇಳದೇ ವರ್ಷನೇ ಕಳೆದಿತ್ತು
ನನ್ನ ಗೂಡೆ ನೀರ್ ಹಿಡ್ಡ್ ನಿತ್ತುಟು
ಅಮ್ಮನ ತಲೆ ನನ್ನ ತೊಡೆ ಮೇಲುಟ್ಟು
ದೊರ್ಪುನ ಮಾತ್‌ಗ ಆ ಬಾಯಿಲಿ
ಮಂಜ ನೀವು ಲಾಯಿಕ್ ಬೊದುಕಿ ಬಾಳೊಕು
ನನ್ನ "ಊರು ಹೋಗು, ಕಾಡ್ ಬಾ" ತಾ ಕರ್ದದೆ.
ನನ್ನದರತ್ತಾ ಮೋರೆ ತಿರುಗಿಸಿ
ಇದರ ಮೊದುವೆ ಆದು ಬೇಡಂತ ಹೇಳಿದ್ದೆ
ಜಾತಿದ್ದೂ ಅಲ್ಲ, ಜಾಗೆನೂ ಇಲ್ಲೆಂತಾ
ಹೆತ್ತ ಮಗಳಂಗೆ ಲಾಯಿಕ್ಕೂ ನೋಡ್ಯಾಳಾ
ನಮ್ಮ ಮನೆಗೆ ಮಂಜಂಗೆ ನೀ ಸರಿಯಮ್ಮಾ
ನನ್ನದರ ಕಣ್ಣ್‌ಲಿ ನೀರ್ ಉಕ್ಕುತಿತ್ತ್
ಅಮ್ಮಾ.....ಸಾಯೆವ ಮಾತು ಯಾಕೆ
ಹೇಳ್‌ದ್ದ ನನ್ನ ಮನ್ಸ್ ಮತ್ತೆ ಮಾತಾಡ್ತ್ಲೆ
ಮಕ್ಕಳಾ ಪೊರ್ಲುಲಿ ನೋಡಿಕಣಿ
ಇನ್ನು ಎನೇನೋ ಗೊಡಿಸಿಕಂಡ್
ಅರ್ಥ ಆಗದೆ ಗಾಳಿಗೆ ತೇಲಿ ಹೋತ್
ನಾವು ನೀರ್ ಕುಡ್ಸಿದೋ
ನೀರ್ ಹೊಟ್ಟೆಗೆ ಹೋತಿದ್ದಾಂಗೆ
ಅದರತ್ತ ತಿರ್‌ಗಿದ ಅಮ್ಮನ ಬಾಯಿ ಮುಚ್ಚಿತ್
ಕಣ್ಣ್‌ಗಳ ಹೊಳ್ಪು ಬಾಡಿತ್
ಬೊಗ್ಗಿದ ಕೈ ಕಾಲ್ ಮುದ್ದೆಗಟ್ಟಿದೋ
ನಮ್ಮ ಕಣ್ಣೆದುರಿಗೇ ಉಸುರು ನಿಲ್ಲಿಸಿದೋ
ಬೀಸುತ್ತಿದ್ದ ಗಾಳಿ ಸ್ವರ ಜೋರ್ ಜೋರಾತ್ತ್
ಜಡಿಕುಟ್ಟು ಮಳೆಲಿ ನಾಯಿ ಪಾಂಗ್ ದೂರಾತ್
ಜುವ ಇಲ್ಲದ ಅಮ್ಮನ ನೆನ್‌ಪ್ಪು ನಮ್ಮಲ್ಲಿತ್ತು.

ಬಾಲೆಕ್ಯಕ್ಕನ ಬಾಲ್ಯದಾಟಿಕೆ

–ಪುನಿತ್ ರಾಘವೇಂದ್ರ ಕುಂಟುಕಾಡು

ಊರೊದ್ದೆಟ್ಟಿ ತಮ್ಮಣ್ಣ ಗೌಡ್ರ ನಾಕ್ ಗಂಡ್, ಮೂರ್ ಹೆಣ್ಣ್ ಮಕ್ಕಳ ಪೈಕಿ ಕಡೇ ಗಂಡ್ ಸಂತಾನನೇ ಹೊದ್ದೆಟ್ಟಿ ಬೆಳ್ಳಿಯಪ್ಪ ಗೌಡ. ಬೆಳ್ಳಿ ಹೊಳ್ಪಿದಾಂಗೆ ಅವರ ವಿದ್ವತ್ ಕೂಡಾ ಹೊಳಿತಿದ್ದದಿಕೆ ಸಾಕ್ಷಿನೇ ಅವು ಬರ್ದ ಯಕ್ಷಗಾನ ಪ್ರಸಂಗ "ಉದಂಕ ಚರಿತೆ"!! ಬೆಳ್ಳಿಯಪ್ಪ ಗೌಡ್ರ ನಾಕ್ ಹೆಣ್ಣ್, ಎರ್ಡ್ ಗಂಡ್ ಸಂತಾನಲಿ ಸುರೂನ ಹಿರಿಯಕ್ಕನೇ ನಮ್ಮ "ಬಾಲಕಿ". ಎಲ್ಲವ್ಕೆ ಮೋಕೆನ "ಬಾಲೆಕ್ಯಕ್ಕ". ಹುಟ್ಟಿದ್ ಹೊದ್ದೆಟಿಲಿ ಆದರೂ ಬೆಳ್ದದೆಲ್ಲಾ ಸೋದರಮಾವನ ಮನೆಲಿ. ಸತ್ಯಕ್ಕೂ ಹೇಳ್ರೆ ಅದ್ ಬರೇ ಮನೆ ಅಲ್ಲ.. ಸ್ವರ್ಗ ಸಂಸಾರ.. ಕುಡೆಕಲ್ಲು ಉಕ್ರಪ್ಪ ಗೌಡ, ದೇವಮ್ಮನೇ ಅದರ ಹಿರೀಕರ್. ಮಾವನ ಮನೆಲಿ ಪ್ರಾಯಕ್ಕೆ ಬಾಕನ ಮುಟ್ಟ ಸೊಕ್ಕಿದೇ ಸೊಕ್ಕಿದ್. ಸ್ಥಾನಂದ ಆಚೆ ಕರೆಲಿರುವ ಹುಣ್ಸುಳಿ ಮರ ಅರೆ ಹೊಡಿ ಆದೇ ಇವರ ಉರ್ತಕೊಳ್ಳಿಗೆಗಡ!! ಇನ್ನ್ ಮನೆ ಅಟ್ಟದ ಮೆಟ್ಲ್ ಅಲ್ಗದೆ ಒಳ್ದದ್ ದೇವಮ್ಮಜ್ಜಿನ ಪುಣ್ಯ.. ಹಿಂಗಿರ್ಕಾಕನ ನಮ್ಮ ಬಾಲೆಕ್ಯಕ್ಕ ಹೊದ್ದೆಟ್ಟಿಗೆ ಬಂದ್ ತಂಬೂರ್ದೇ ಚೋಪರಾಗಿ. ಅಂದ್ ಮಗ್ಳ್ ಹೊದ್ದೆಟ್ಟಿ ಸುಬ್ಬಕ್ಕನ ಮನೆಗೆ ದೇವಮ್ಮಜ್ಜಿ ಪುಳ್ಳಿ ಬಾಲೆಕಿನ ಕರ್ಕಂಡ್ ಬಂದ ದಿನ ಗಮ್ಮತ್ತೇ ಗಮ್ಮತ್. ಒಂದಿನ ಕಡ್ಡೆ ಉಪ್ಪಣ ಗೈಪಾದರೆ ಮಾರ್ನೆ ದಿನ ಅಳಿಯ ಬೆಳ್ಳಿಯಪ್ಪ ಹೊಡ್ದ ಹೊಳ್ಕೆ ಗೈಪು. ಇನ್ನ್ ಕೋಳಿ, ಮೀನ್‌ಗೆ ಬರ ಎಲ್ಲಿ? ಬಗೆ ಬಗೆ ಬಾರಣೆ ಗಮ್ಮತ್ ನೋಡ್ದ ಬಾಲೆಕ್ಯಕ್ಕಂಗೆ ವಾಪಸ್ ಕುಡೆಕಲ್ಲ್‌ಗೆ ಅವ್ವನೊಟ್ಟಿಗೆ ಹೋಕೆ ಮನ್ಸೇ ಇಲ್ಲೆ. (ಇಲ್ಲಿ ಯಾಗೋಳು ಹಿಂಗೆ ಗಮ್ಮತ್ತಿದ್ದದೆತ ನೆನ್ಸೊಳೊ) ಕಡೆಗೂ ಉಯ್ರೋಳುಂದಲೂ ಕಡೆಗಟ್ಟಾಗಿ ಮರ್ತ್‌ಕಂಡಿರುವ ಪುಳ್ಳಿನ ಬುಟ್ಟೇ ಹೋದೋ ದೇವಮ್ಮಜ್ಜಿ. ನಾಕ್ ದಿನಲೇ ಬಾಲೆಕ್ಯಕ್ಕಂಗೆ ಗೊತ್ತಾತ್ ಅವು ಚೋಪರಾಗೊಳೊತ.. ಬಗೆ ಬಗೆ ತಿನ್ಸ್ ಅವ್ವ ಬಂದಿರ್ಕಾಕಕನ ಮಾತ್ರ. ಈಗಲೋ.. ಯಾಗ ನೋಡ್ರೂ ಒಂದೇ ಬಗೆ.. ಗಂಜಿ ಪೊಜ್ಜಿ..!

ಚೋಪರಾಗಿ ಹುಟ್ಟಿದ ಮನೆ ಸೇರ್ದ ಬಾಲೆಕ್ಯಕ್ಕಂಗೆ ಸುಮ್ಮನೆ ಕಾಲ್ ನೀಂಡಿ ಕುದ್ರಿಕೆ ಎಲ್ಲ್ಯಾದೆ... ಯಾಗ ನೋಡ್ರೂ ಕುಂಡೆ ಹರಿವಷ್ಟ್ ಕೆಲ್ಸ!! (ಎಷ್ಟ್ ಮಾಡ್ರೂ ಮುಗ್ಯದ ಕೆಲ್ಸಕ್ಕೆ ನಮ್ಮ ಅರೆಬಾಸೆಲಿ ಇದರ್‌ಂದ ಮೇಲೆನ ಪದ ಇಲ್ಲೆ ಅನ್ಸಿದೆ) ಎಷ್ಟಾದರೂ ಬೇಸಾಯದ ಕುಟುಂಬ. ಅದ್ಕೇ ಹೇಳ್ದಲ್ಲಾ, ವ್ಯವಸಾಯ ಮಾಡ್ದಂವ ಬೇಗ ಸಾಯ!! ಒಟ್ಟೊಟ್ಟಿಗೆ ತಮ್ಮ ತಂಗೆಕಳ ಚಾಕ್ರಿ ಬೇರೆ. ಅಪ್ಪ ಬೆಳ್ಳಿಯಪ್ಪಂಗೂ ಮಗ್ಳ್ ಒಟ್ಟಿಗಿದ್ದರೇ ಕೆಲ್ಸ ಸರಾಗಾದು. ಅದರ್ಲೂ ಮುಖ್ಯ ಕೆಲ್ಸ ಗ್ಯಾರ್ದಣ್ಣ್ ಸರಾಯ ಕಾಸಿಕೆ ಅಂತೂ ಮಗ್ಳಿಲ್ಲದೆ ನಿಮೂರ್ತಿ ಇಲ್ಲೆ. 'ನೀ ಬಂದರೆ ಬಾರಿ ಲಾಯ್ಕ್ ಬಂದದೆ'ತ ಪೂಸಿನೂ ಹೊಡ್ಕಂಡವೆ. ಒಂದಿನ ಹಿಂಗೇ ಸಿಗ್ದಾಕಿದ ಹಣ್ಣ್‌ನ ಮಡ್ಕೆಲಿ ತುಂಬ್ಸಿದೇ ತಲೆಲಿ ಇಸಿಕಂಡ್ ಬೀಜ ಕೊಚ್ಚಿಲಿ ಕಾಸಿಕೆ ಅಪ್ಪನೊಟ್ಟಿಗೆ ಹೊರ್ಟೋ ಬಾಲೆಕ್ಯಕ್ಕ. ಮಟ ಮಟ ಮಧ್ಯಾನ ಕರ್ಗೆಲ್ ನಾತನ ತಲೆಲಿಸಿಕಂಡ್ ಕಣ್‌ಂಗ ಕರೆಲಿ ಬೀಸರ ಹೋತಿದ್ದವ್ಕೆ ಯಾವ ಪೀಡೆ ಕಣ್ಣಾಕಿತೋ ಗೊತ್ಲೆ. ಲಂಗಕೊಡಿ ಕಿಂಕ್‌ಣಿ ಬೇರ್ಳೆಡೆಗೆ ಚೊಡ್ಚಿ, ಎಡ್ಗಿ ಬೀಳಕಾದವು ಅಲ್ಲಿಗೇ ಆದರ್ಸಿಕಂಡೊ. ಮೈ ಏನೋ ಆದರ್ಸಿಕಂಡತ್, ಆದರೆ ಮಡ್ಕೆ ಎಲ್ಲಿ ಕೇಳ್ದೆ?? ಮಡ್ಕೆನ ಬುಡ ಒಡ್ದ್, ಕರ್ಗೆಲ್ ಹಣ್ಣ್ ತಲೆ, ಮೋರೆಲಿ ಅರ್ಕಂಡ್, ಮಡ್ಕೆನ ಕಂಠ ಮಾತ್ರ ಇವರ ಕುತ್ತಿಗೆಲಿ ನೇಲ್ತುಟ್ಟು.. ಹಳ್ಸ್‌ಲ್ ಕರ್ಗೆಲ್ ನಾತ.. ಬಾಯಿ ದೊಂಡೆ ಇಡೀ ಕಯಿಂಪೆ!! "ಎಂತ ಕೂಸು" ತೇಳ್ದ ಅಪ್ಪ ಬೆಳ್ಳಿಯಪ್ಪಂಗೆ "ಕೂಸು ಅಲ್ಲಾ.. ಕೂಸುನಪ್ಪ!!" ತ ಬೊಯ್ಕಂಡೇ ಮೀಯಕೆ ಚೋಡಿಕೆ ಓಡ್ದೊ.

ಬೆಳ್ಳಿಯಪ್ಪ ಗೌಡ್ರೂ ಯಾಗೊಳು ಸರಾಯ ಕಾಸಿಕೆ ಎಲೆ ಬಾಲೆ ಮನ್ಸ್‌ನ ಬಾಲೆಕ್ಯಕ್ಕನನೇ ಕರ್ಕಂಡ್ ಹೋದಕ್ಕೂ ಒಂದ್ ಮಹತ್ತರ ಕಾರಣನೂ ಉಟ್ಟು. ಬಾಲೆಕ್ಯಕ್ಕನ ದೊಡ್ಡ ತಂಗೆ ಕಾಳಿ ಗೂಡೆ ಭಯಂಕರ ಕಿಲಾಡಿ. ಕರ್ಕಂಡೋದರೆ ಕಾಸಿದಲ್ಲಿಂದ ಚೂರಾರ್ ಹೊಯಿಸಿಕಣದೆ ಹೊರ್ಡಿಕಿಲ್ಲೆ. ಕಡೆಗೆ ನೋಡ್ರೆ ಕಾಸಿದವಂಗೆ ಏನಿಲ್ಲದಿದ್ದರೂ ಎರ್ಡ್ ಬೇರ್ಳ್ ನಷ್ಟಾರ್ ಕಮ್ಮಿ ಆಗಿದ್ದದೆ (ಇದ್ ಕುಪ್ಪಿ ಗ್ಲಾಸ್ ಗೆ ಹೊಯಿದ ಗ್ಯಾರ್ದಣ್ಣ್ ದರ

ಅಳ್ತೆ ನೋಡ್ವ ಹಳೇ ಕ್ರಮ. ಕುಪ್ಪಿ ಗ್ಲಾಸ್‌ನ ಅಡಿಂದ ಸರಿಯಾಗಿ ನಡು ಬೆರ್ಳ್, ಕೊಡಿ ಬೆರ್ಳ್‌ನ ಮಟ್ಟಕ್ಕೆ ಸರೀ ಸಿಕ್ಕೊಕು. ಅಲ್ಲಿಗೆ ಒಂದ್ ಹದಾ.. ಥರ್ಟಿ, ನೈಂಟಿಗಳ ಪ್ರಮಾಣಗಳೇ ಅಲ್ಲಿತ್ತೆ). ಜೋನಿ ಬೆಲ್ಲದ ಭರಣಿಂದ ಎಲ್ಲವೂ ಬೆರ್ಳ್ ಕಂತ್‌ಸಿ ತೆಗ್ದರೆ ಕಾಳಿ ಗೂಡೆ ಮಾತ್ರ ಕಂತ್‌ಸಿ ದ ಜಾಗೆನ ಅಲ್ಲಿಗೇ ಪೂಜಿ ಬುಡ್ಡು. ಆಗ ತೆಗ್ದದ್ ಗೊತ್ತಾದ್ಲೆ ಅಲ.. ಕಡೆಗೂ ಇನ್ನೊಂದ್ ದಿನ ಮಗಳ ಕರ್ಕಂಡ್ ಕಾಸಿಕೆ ಹೋದೋ ಬೆಳ್ಳಿಯಪ್ಪ. ಮಡ್ಕೆಗಳೆಲ್ಲಾ ಲಾಯಿಕ್ ಇಸಿ, ಕರೆಲಿ ಗುಂಬ (ಸರಾಯ ತೆಗಿವ ಸಣ್ಣ ಬಾಯಿನ ಮಡ್ಕೆ) ನನೂ ಅಂಡ್‌ಸಿ ಇಸಿದೊ. ಮೇಲೆ ಮಡ್ಕೆಲಿ ನೀರ್ ಬಿಸಿ ಆದದರ ಬದ್ಲಾಯ್ಸಿಕೆ 'ನೊಡಿಕ ಕೂಸು' ತೇಳಿ ಚಣ್ಣೀರ್ ತಾಕೆ ಚೋಡಿಗೋದೊ. ಈ ಗುಂಬಲಿ ಹನಿ ಹನಿ ಸರಾಯ ಕೂಡ್ದೇ ನೋಡಿಕೆ ಕುಸಿ. ಆ ಘಮನ. ಆಹಾ ಸರಾಯದ ಸುದ್ಧತೆ ನೋಡಿಕೆ ಒಂದ್ ಕ್ರಮ ಉಟ್ಟು. ಒಂದ್ ಒಣ್ಗಿಲ್ ಮಡ್ಲ್ (ಸೋಗೆ ಕೊಡಿ, ಬಾಳ್ಲೆಕೀಂತೂ ಆದೆ)ನ ಸರಾಯಕ್ಕೆ ಕಂತ್ ಸಿ ಮತ್ತೆ ಕಿಚ್ಚಿಗೆ ಹಿಡ್ದರೆ ಒಮ್ಮೆಗೆ ಅದಕೆ ಕಿಚ್ಚಿ ಹಿಡ್ಕಂಡದೆ. ನೀಲಿ ನೀಲಿ ಕಿಚ್ಚಿ ಬಂದರೆ ಅಲ್ಲಿಗೆ ಸರಾಯ 100% ಶುದ್ಧ!! ಒಬ್ಬನೇ ಚುರ್ಕರ ಕುದ್ದ್‌ಕಂಡ್ ಕಾಳ್ ಚೆನ್ನೆರ್ಪ್‌ಸಿ ಕಂಬೊದು ಯಾರಿಗೇ ಆದರೂ ಹಿಂಸೆನೇ. ಹಂಗೇ ಕುದ್ದಿದ್ದ ಬಾಲೆಕ್ಯಕ್ಕಂಗೂ ಸರಾಯ ಎಷ್ಟ್ ತುಂಬಿಟುತ ನೋಡಿಕೆ ಆಸೆ. ಅಪ್ಪ ಹೆಂಗೂ ಹಕ್ಕಲೆ ಇಲ್ಲೆ.. ನೋಡೊನೊತ ಎರ್ಡ್ ಮಡ್ಲ್‌ಗೆ ಕಿಚ್ಚಿ ಹೊತ್ತ್‌ಸಿ ಅದರ್ನೇ ಗುಂಬದಕ್ಕಲೆ ಹಿಡ್ದೊ!! ನೋಡೀ.. ಕಿಚ್ಚಿ ಹಿಡ್ಕಂಡದೇ ಸರಾಯಕ್ಕೆ!! ಭೋಃಗ್ಗತ ಅಷ್ಟೆತ್ತರಕ್ಕೆ ಹೊತ್ತಿದ ಕಿಚ್ಚಿ ನಿತ್ತದ್ ಗುಂಬಲಿದ್ದ ಸರಾಯ ಒತ್ತರೆ ಹೊತ್ತಿ ಆರ್ದ ಮೇಲೆನೇ!! ಕಿಚ್ಚಿ ಕಂಡ್ ಓಡಿಬಂದ ಬೆಳ್ಳಿಯಪ್ಪ ಸರಾಯ ಹೋತಲ್ಲಾತ ಹನೀಸೂ ಸಿಟ್ಟ್ ಮಾಡಿಕಣದೆ 'ನಿಂಗೆ ಏನಾತ್ಲೆಲ್ಲಾ ಕೂಸು' ತ ಹೆದ್ರಿ ಚಂಡಿ ಆಗಿ ದರ್ಪುತಿದ್ದ ಬಾಲೆಕ್ಯಕ್ಕನ ಮನೆಗೆ ಕರ್ಕಂಡ್ ಹೊರ್ಟೊ. ಅಂತೂ ಬಾಲೆಕ್ಯಕ್ಕನ ಬಾಲ್ಯದಾಟಿಕೆಂದ ಅಪ್ಪ ಬೆಳ್ಳಿಯಪ್ಪಂಗೆ ಇನ್ನೊಮ್ಮೆ ಸರಾಯ ಇಲ್ಲದಾಂಗಾತ್!!

ಕುಡಿಬೇಡೋ ತಮ್ಮ..!!!!

–ಕರ್ಣಯ್ಯನ ಕೃಷಿಕಾ ಮಂದಣ್ಣ

ಕುಡಿಬೇಡ ನನ್ನ ಮುದ್ದು ತಮ್ಮ
ಅಯ್ಯೋ ಅಕ್ಕ, ನಿನ್ನದೊಂದ್ ಕರ್ಮ

ಓ ತಾತ ನೀನ್ ಏನ್ ಇಲ್ಲಿ
ಆಹಾ! ಉಪ್ಪಣ ನೋಡ್ ಇಲ್ಲಿ
ಎಲ್ಲಿ ಹೋತ್ ಈ ನನ್ನ ಅಪ್ಪಿ
ತಂದೆ ನೋಡ್ ಇಲ್ಲಿ ಕಳ್ಳ್ ಕುಪ್ಪಿ

ಬೇಗ ಬಾಕಿತ್ತ್ ಅಲ್ಲರಾ ಬಾವ
ಶುರುಮಾಡ್ತ್ ಬಯ್ಯಕೆ ಅವ್ವ
ಸಾಕ್ ಮಾಡ್ ನಿನ್ನದೊಂದ್ ರೋಗ
ದಿನಾ ಇಡೀ ಹಾಡಿಯಾ ಅದೇ ರಾಗ

ಹೇಳ್ದ್ ಕೇಳೋ ತಮ್ಮ
ಮರ್ಯಾದೆ ಉಳ್ಸೋ ಗುಮ್ಮ
ಆತ್ ಸೆರಿ ಕುಡಿಯಲ್ಲೆ ಇನ್ನ್
ಬಾಯಿಲಿ ಮಾತ್ರ.... ಅದೇ ರಾಗ ಇನ್ನ್...

ಮಳೆನ ಗೂಡು

–ಮನೋಜ್ ಕುಡೇಕಲ್ಲು

ಕಂಡೆ ಹೊಸ್ತೊಂದ್ ಜೋಡ್ಯಕ್ಕನಂದ್
ಬೊಯ್ಲ್ ದಾರಿಲಿ, ನಾ ಪಾಲ ದಾಟುವಲ್ಲಿ
ಬರೆಂದ ಬಾಗಿ.. ಚೋಡಿಗೆ ತೂಗಿದ
ಒಚ್ಚಿ ಬೊಚ್ಚಿದ ಇರ್ಂಜಿರ್ ಗೆಲ್ಲ್‌ಲಿ
ದರ್ಗ್ ಬಣ್ಣದ ತೊಪ್ಪುಳುಲಿ ಸೊಕ್ಕಿದ
ಅರ್ಶ್ಯಣದ ಎದೆನ ಗಿಡ್ಡೆ ಚಿಟ್ಟೆಕ್ಕಿ
ಚಿಲ್ಲಿ ಕಾಲೆಗೆರ್ಡಂದ್ ನಿತ್ತಲ್ಲಿ ನಿಲ್ಲತಿತ್ತೆ..
ಕಟ್ಟಿದದ್ ಗೂಡಂದ್ ಕಾಂಬಜದ್ಕೆ ಅಲ್ಲಿತ್ತೆ.
ಗಂಡಕ್ಕಿನೂ ಇತ್ತಲ್ಲೆ ಬಲ್ಲ್ಯೊಳೆಗೆ ಮರ್ಟ್
ಹುಡ್ಕತಿತ್ತ್, ಕಟ್ಟಿದಲ್ಲೆ ಕನ್ಸಾಮನೆನ
ಎಲ್ಲಿತ್ತ್ ಕಾಂಬಕೆ, ಬೊಚ್ಚಿ ಬಾಗಿದ ಗೆಲ್ಲ್‌ಲಿ
ಅದರ ಹುಲ್ಲು ನಾಕಿತ್ತ್ ಕೆಳೆಗೆ ನೇಲ್ದ ಗೆಲ್ಲ್‌ಲಿ
ಆಗ ಬಂದ ರಣಮಳೆಲಿ ಗಾಳಿ ಗುಡ್ಗು ಸಿಡ್ಲಿತ್ತ್
ಊರೆಲ್ಲ ಮನೆನ ಮುಳಿನೇ ಹಾರಿಜಾಲ್‌ಲಿತ್ತ್
ಇನ್ನೆಲ್ಲಿ ಒಳೆಕುಟ್ಟು, ಗೆಲ್ಲ್‌ಮೇಲೆನ ಗೂಡು..?
ಗೆಲ್ಲ್ ಒಚ್ಚಿತ್ತ್, ಗೂಡು ಜಾರಿತ್ತ್ ಚೋಡಿಗೆ.
ಕಚ್ಚತಂದ ಹುಲ್ಲುಲೆಲ್ಲ ಕನ್ಸೇ ತುಂಬಿತ್ತ್
ಕುತ್ತಿ ಮೆಡ್ದ ಮನ್ಸ್‌ಲೆಲ್ಲ ಪ್ರೀತಿ ಪಾಂಬಿತ್ತ್
ಬಿಸ್ಲ್ ಚಳಿ ಗಾಳಿಮಳೆಗೆ ಇದೆಲ್ಲಿ ಗೊತ್ತುಟು
ಚಟ್ಟ್ ಕೊಟ್ಟ್ ಊರ್‌ನ ಮಸನ ಮಾಡಿಟು.

ಅಪ್ಪ–ಅವ್ವ–ಮಂಜ

–ಕುಂಭುಗೌಡನ ಮುತ್ತಮ್ಮ

ಜಗನ್ನಾಥ ಒಬ್ಬ ರೈಲ್ವೆ ಅಧಿಕಾರಿ. ಅಂವನ ಹೆಣ್ಣ್ ಲಕ್ಷ್ಮಿ. ಅವಿಬ್ಬರೂ ಬಾರೀ ಸುಕ ಸಂತೋಸಂದ ಇದ್ದೊ. ಯಾವುದಕ್ಕೂ ಅವ್ಕೆ ಏನೂ ಕಮ್ಮಿ ಇತ್ಲೆ. ಆದರೆ ಒಂದೇ ಒಂದು ಚಿಂತೆ ಅವರ್ನ ಕಾಡ್ತಿತ್ತ್. ಅದೇನ್‌ತೇಳ್ರೆ ಮಕ್ಕಳೇ ಇಲ್ಲದ ಕೊರಗ್. ಸಾದ್ಯ ಆದಷ್ಟ್ ದೇವಾನ್ ದೇವತೆಗಳ ಬೇಡಿಕಂಡೊ, ಮಕ್ಕ ಆತ್ಲೆ. ಎಲ್ಲಾ ದೇವಸ್ಥಾನ ದರ್ಶನ ಮಾಡಿ ದೇವ್ರುಗಳ ಬೇಡಿಕಂಡರೂ ಏನೂ ಫಲ ಸಿಕ್ಕಿತ್ಲೆ. ಬಾಳ ಅನ್ಯೂನ್ಯತೆಂದ ಇದ್ದ ದಂಪತಿಗ ಒಂದ್ ತೀರ್ಮಾನಕೆ ಬಂದೊ, ಅದೇನ್ ತೇಳ್ರೆ ಅನಾಥಾಶ್ರಮಂದ ಒಂದ್ ಕೂಸುನ ತಕಂಬದುತ, ಹಂಗೆನೆ ಅವ್ಕೆ ಒಂದ್ ಇಷ್ಟ ಆದ ಗಂಡ್ ಕೂಸು ಸಿಕ್ಕಿತ್, ಬಾಳ ಪ್ರೀತಿಂದ ಸಾಕಿ ಬೆಳ್ಸಿದೊ. ಅಂವ ಏನ್ ಕೇಳ್ದೆ ಅದೆಲ್ಲ ಕ್ಷಣಲೇ ಪೂರೈಸ್ತಾ ಇದ್ದೊ. ಹಂಗಾಗಿ ಅಂವ ಒಳ್ಳ ಲಾಯ್ಕಲಿ ಓದಿ ಇಂಜಿನಿಯರ್ ಆತ್. ಅಪ್ಪ, ಅವ್ವಂಗೆ ಕುಸಿ ಕೊಟ್ಟತ್. ಅವಂಗೆ ಒಳ್ಳ ಕಂಪೆನಿಲಿ ಕೆಲ್ಸನೂ ಸಿಕ್ಕಿತ್. ಈಗ ಅಪ್ಪ, ಅವ್ವಂಗೆ ಮಂಞಂಗೆ ಮೊದುವೆ ಮಾಡೋ ಆಸೆ ಬಾತ್. ಹಂಗೆನೆ ಹೆಣ್ಣ್ ಹುಡ್ಕಿಕೆ ಸುರು ಮಾಡ್ದೊ. ಯಾವ್ದೂ ಸರಿ ಬಾತ್ಲೆ. ಸರಿ ಬಂದದರ ಇಂವ ಬೇಡ ತ ಹೇಳ್ತಾ ಇತ್ತ್. ಕಡೆಗೆ ಒತ್ತಾಯ ಮಾಡಿ ಕೇಳ್ಕನ ಒಂದು ಗೂಡೆನ ಇಷ್ಟ ಪಡ್ತಾ ಒಳೆ ತ ಹೇಳ್ತ್. ಅಪ್ಪ ಅವ್ವ ಅದೇ ಗೂಡೆ ಒಟ್ಟಿಗೆ ಮೊದ್ವೆ ಮಾಡ್ಸಿದೊ. ಗೂಡೆ ಅಂವನ ಕಂಪೆನಿಲೇ ಕೆಲ್ಸ ಮಾಡ್ತಿತ್ತ್. ಹಂಞ ಸಮೆ ಕಳೆಯಕನ ಅವಳ ಕೆಲಸ ಹೋತ್. ಅಪ್ಪ ಅವ್ವನ ಜೊತೆ ಇರ್ಲಿ, ಕೆಲ್ಸ ಸಿಕ್ಕಿದ ಮೇಲೆ ಕರ್ಕಂಡ್ ಹೋನೆತ ಇಲ್ಲೇ ಬುಟ್ಟತ್. ದಿನ ಕಳ್ದಂಗೆ ಅತ್ತೆ ಮಾವನೊಟ್ಟಿಗೆ ಸೊಸೆಗೆ ಸರಿ ಬಾರದಾತ್. ಗಂಡಂಗೆ ಪುಕಾರ್ ಹೇಳಿಕೆ ಸುರು ಮಾಡ್ತ್. ಹೆಣ್ಣ್‌ನ ಮಾತ್ ಅಪ್ಪ–ಅವ್ವ ಅನಾಥನಾಗಿದ್ದಂವನ ಸಾಕಿದ್, ಕಷ್ಟಪಟ್ಟದ್ ಮರ್ತೇ ಹೋತ್. ಅಪ್ಪ ಅವ್ವನ ಮೇಲೆ ಅಸಮಾಧಾನ ಸುರು ಆತ್. ಬುದ್ಧಿವಂತ ದಂಪತಿಗ ಅವರ ಮನೆಂದ 5–6 ಕಿ.ಮೀ ದೂರಲಿ ಸೈಟ್ ತೆಗ್ದ್ ಮನೆ ಕಟ್ಟಿಕೊಟ್ಟ್ ಇವರ ಬೇರೆ ಕಳ್ಸಿದೊ. ಬೇರೆ ಹೋದವ್ಕೆ ಇವರಲ್ಲಿಗೆ ಬಾದು ಕಮ್ಮಿ ಆತ್. ಬಂದರೆ ಮಂಞ ಮಾತ್ರ ಬಂದ್ ಹೋಗ್ತಾ ಇತ್ತ್. ಕಡೆ ಕಡೆಗೆ ಅಂವನೂ ಬಾದು ಕಮ್ಮಿ ಆತ್. ಅಪ್ಪ ಅವ್ವ ಫೋನ್ ಮಾಡ್ರೆ ಯಾಗಾರ್ ಒಮ್ಮೆ ಬಂದ್ ಹೋಗ್ತಾ ಇತ್ತ್. ಅಪ್ಪ ಅವ್ವಂಗೆ ಇದೇ ಕೊರ್‌ಗ್ ಇದ್ದರೂ ಮಂಞ ಸೊಸೆ ಎಲ್ಲೇ ಇದ್ದರೂ ಸುಖವಾಗಿ ಇರಲಿ ತ ಬಯಸ್ತಾ ಇದ್ದೊ.

ಒಮ್ಮೆ ಲಕ್ಷ್ಮಿಗೆ ತುಂಬಾ ಹುಷಾರಿಲ್ಲದೆ ಆತ್. ಮಂಜನ ಬಾಕೆ ಹೇಳ್ರೂ ಬಾತೇಲೆ, ಸೊಸೆ ಅಂತೂ ತಿರ್ಗಿ ನೋಡ್ತ್‌ಲೆ. ಖಾಯಿಲೆ ಜೋರಾತ್. ಹಂಞ ದಿನ ಕಳ್ದ್ ತೀರಿ ಹೋತ್. ಸುದ್ದಿ ಕೇಳಿ ಮಂಞ ಒಬ್ಬನೇ ಬಂದದ್. ಅವಂಗೆ ರಜೆ ಸಿಕ್ಕುಲೆ ತೇಳಿ ಅಪ್ಪನೇ ಎಲ್ಲ ಕಾರ್ಯ ಮಾಡಿ ಮುಗ್ಸಿತ್. ಈಗ ಅಪ್ಪ ಒಬ್ಬಂಟಿ ಆತ್. ತಾನೇ ಅಡ್ಗೆ ಕೆಲ್ಸನೆಲ್ಲಾ ಮಾಡಿ ಕಣ್ತಿತ್ತ್. ಹೆಚ್ಚ್ ಸಮಯನ ದೇವರ ಕೋಂಬರೆಲೇ ಕಳಿತಾ ಇತ್ತ್. ಒಮ್ಮೆ ಹುಷಾರ್ ತಪ್ಪಿತ್. ಹತ್ರದ ಮನೆವ್ ಬಂದ್ ಲಾಯ್ಕಲಿ ನೋಡಿಕಂಡೊ. ಉಸಾರಾತ್ ಹಂಞ ದಿನ ಕಳ್ದಂಗೆ ಪುನಃ ಉಸಾರ್ ತಪ್ಪಿತ್. ನೆರೆಕರೆಯವು ಆಸ್ಪತ್ರೆಗೆ ಸೇರ್ಸಿದೊ. ಮಂಞಂಗೆ ಫೋನ್ ಮಾಡ್ರೆ ತಿರ್ಗಿಸ ನೋಡ್ತ್‌ಲೆ. ಒಂದ್ ವಾರ ಕಳ್ದಂಗೆ ತೀರೇ ಹೋತ್. ಗಂಡ ಹೆಣ್ಣ್ ಇಬ್ಬರ್ ಬಂದು ಎಲ್ಲ ಕಾರ್ಯನ ಬಾರೀ ಜೋರ್‌ಲಲಿ ಮುಗ್ಸಿದೊ. ವಾಪಸ್ ಹೋಕನ ಅಪ್ಪನ ವಾಸದ ಮನೆ ಪತ್ರ, ಬ್ಯಾಂಕ್ ಹಣ, ಅವ್ವಂದ್ ಅಪ್ಪಂದ್ ಚಿನ್ನ ಎಲ್ಲ ತಕಂಡ್ ಹೋದವು, ಅಪ್ಪನ ಮನೆನ ಮಾರಿಬುಟ್ಟೊ.

ಮಕ್ಕ ಇಲ್ಲೆ ವಯಸ್ಸ್ ಕಾಲಕೆ ಆಸರೆ ಆದೆತ ಯಾರೋ ಹೆತ್ತ್ ಬಿಸಾಕಿದ ಕೂಸುನ ತಂದ್ ಸಾಕಿ, ಓದ್ಸಿ, ಕೆಲ್ಸ ಕೊಡ್ಸಿ, ಆಸ್ತಿನೂ ಮಾಡಿಕೊಟ್ಟವ್ಕೆ ಸಾಕು ಮಂಞ ಕಷ್ಟಕೂ ಆತ್ಲೆ, ಸುಕಕೂ ಆತ್ಲೆ. ಸಾಂಕಿದವು ನಮ್ಮ ಹಣೆಬರನೇ ಇಷ್ಟ್ ತ ಸುಮ್ಮನಾಗಿದ್ದೊ. ಸಾಂಕಿದವನಾಗಲಿ, ಹೆತ್ತನವನಾಗಲೀ ಯಾರೇ ಆದರು ಮರೆಯಕಾಗದ್ ತ ಜನ ಮಾತಾಡಿಕಣ್ತಿದ್ದೊ.

ಸಾಂಪ್ರದಾಯಿಕ ಅಡಿಗೆ

–ಕೊಂಪುಳೀರ ಇಂದಿರಾ ರಮೇಶ್


ಹಳೆ ಅಡಿಗೆನ ಹೊಸ ಸುದ್ದಿ ಆಗಿ ಬೊಳಿಗೆ ತರ್ತಾ ಒಳೋ
ಕರ್ನಾಟಕ ಅರೆಭಾಷೆ ಮತ್ತೆ ಸಾಹಿತ್ಯ ಅಕಾಡೆಮಿಯವು
ಸುರುಗೆ ತಂದೊ, ಐನ್‌ಮನೆ ಸಂಸ್ಕೃತಿ ಜಂಬರನ
ಮತ್ತೆ ಬಾತ್‌ನೋಡಿ ಸಾಂಪ್ರದಾಯಿಕ ಅಡಿಗೆಗ
ಯಾವ್ಯಾವ ಹಬ್ಬ–ಹರಿದಿನಲಿ ಎಂಥೆಂಥಾ ಅಡಿಗೆಗ
ಅಂಥ ಅಡಿಗೆನ ಮಾಡಿ ತೋರಿಸುವೆ ತೇಳುವ ಜಂಬರ
ಬ್ಯಾರೆ–ಬ್ಯಾರೆ ಊರ್‌ಗಳ್‌ಂದ ಹೆಣ್ಣ್‌ಮಕ್ಕ ಬಂದ್
ದಿನಕ್ಕೊಂದು ಹಬ್ಬದಡಿಗೆಗಳನೆಲ್ಲ ಮಾಡಿ ತೋರಿಸಿದೊ
ಮಾಡ್ದ ಅಡಿಗೆನ ಎಲ್ಲವುಕೂ ಉಣಬಡಿಸಿದೊ
ಬಂದವೆಲ್ಲವೂ ತಿಂದ್ ಬಾಯಿ ಚಪ್ಪರಿಸಿದೊ
ಮೊದ್ಲ್ ಮಾಡ್‌ತಿದ್ದ ಅಡಿಗೆನ ಯಾರ್ ಮರ್‌ತತ್ಲೆ
ಆದರ್ ಉದಾಸೀನ ಮಾಡಿಕಂಡ್ ಸೋಮಾರಿಗಾಗಿದ್ದೊ
ಮತ್ತೆ, ಎಚ್ಚೆತ್‌ಕಂಡೊಳೊ, ಅರೆಭಾಷೆ ಅಕಾಡೆಮಿಯವು
ಪ್ಯಾಟೆ ತಿಂಡಿನ ತಿಂದ್ ಹಿಡ್ಸಿಕಂಡೊಳೊ ಕಾಯಿಲೆನಾ
ಯಾರ್ನ ಬೇಕರೆ ಕೇಳಿನೋಡಿ ಕಾಯಿಲೆ ಇಲ್ಲದವು ಒಳನಾ ತಾ?
ಮಕ್ಕಳಿಗಂತು ಪ್ಯಾಟೆ ತಿಂಡಿ ತೇಳಿರೆ ಅಮೃತ ಸಿಕ್ಕಿದಂಗೆ
ಪ್ಯಾಟೆ ತಿಂಡಿಂದಾಗಿ ಸಣ್ಣ ಮಕ್ಕಳಿಗೆಸ ದೊಡ್ಡವರ ಕಾಯಿಲ
ನಮ್ಮ ಸಾಂಪ್ರದಾಯಿಕ ಅಡಿಗೆಲಿ ಒಂದೊಂದು
ಕಾಯಿಲಕ್ಕೂ ಉಟ್ಟು ಮದ್ದ್
ಪ್ಯಾಟೆ ತಿಂಡಿನ ಬುಟ್ಟ್ ಮನೆ ತಿಂಡಿಗೆ ಹೆಚ್ಚ್‌ನ ಗಮನ
ಹರ್‌ಸೋ ಅಲಾ.

ನಮ್ಮ ಪತ್ರಿಕೆಗೆ ಕತೆ, ಕವನ, ಹನಿಗವನ, ಚುಟುಕು, ಲೇಖನ, ಅನುಭವ ಕಥನ, ಪ್ರವಾಸ ಕಥನ ಹಂಗೆ ಪತ್ರಿಕೆ ಬಗ್ಗೆ ನಿಮ್ಮ ಅನ್ಸಿಕೆ ಅಭಿಪ್ರಾಯ ಗಳ್ನ ಬರೆಯವು ಸಂಪೂರ್ಣ ಅರೆಬಾಸೆಲಿ ಬರ್ದ್

ಅರೆಬಾಸೆ ಮುಡ್ಪು ಪತ್ರಿಕೆ
C/o ವಸಂತ ಟ್ರೇಡರ್ಸ್
ಬೈಪಾಸ್ ರಸ್ತೆ
ಗೋಣಿಕೊಪ್ಪ –571213
ವಾಟ್ಸಾಪ್‌ಲಿ ಕಳ್ಸಿರೆ: 9535615759
ಮಿಂಚಂಚೆಲಿ ಕಳ್ಸಿರೆ: **arebasepatrike@gmail.com** ಗೆ ಕಳ್ಸಿ ಕೊಡಿ.

ನಮ್ಮೊಳಗಿನ ಸಾಧಕರು

–ಹೊಸೊಳಿಕೆ ಯೋಗೀಶ್



ಸಾಹಿತ್ಯಲೋಕದ ನಕ್ಷತ್ರ
ಟಿ.ಜಿ.ಮುಡೂರು

ತಮ್ಮಯ್ಯ ಗೌಡ ಮುಡೂರು, ಟಿ.ಜಿ. ಮುಡೂರು ನಾಮಾಂಕಿತಲಿ ಹೆಸರುವಾಸಿ. ಮದರಾಸು ವಿಶ್ವವಿದ್ಯಾಲಯಲಿ ಕನ್ನಡ ವಿದ್ವತ್ ಪದವಿ, ಮೈಸೂರು ವಿಶ್ವವಿದ್ಯಾಲಯಂದ ಎಂ.ಎ ಮತ್ತೆ ಬಿ.ಎಡ್ ಪದವಿ ಪಡ್ಕಂಡ್ 1948 ರ್ಲಿ ಮಾಸ್ಟ್ರಾಗಿ ಕೆಲಸಕ್ಕೆ ಸೇರುವೆ. 1982 ರ್ಲಿ ಪಂಜ ಜೂನಿಯರ್ ಕಾಲೇಜ್‌ಂದ ನಿವೃತ್ತಿ ಹೊಂದಿದೊ. ಇವರ ಅಪ್ಪ ಸುಬ್ಬಪ್ಪಗೌಡ, ಅವ್ವ ಬಾಲಕ್ಕ 1927 ರ್ಲಿ ಹುಟ್ಟಿದ ಇವ್ಕೆ ಈಗ 92 ವರ್ಷ. ಎಳೆ ಹೈದಗಳ ಉತ್ಸಾಹ, ಚಟುವಟಿಕೆಗ, ಸಂಘಟಿಸುವ ಪ್ರೋತ್ಸಾಹಿಸುವ ಮನ್ಸ್ ಮತ್ತೆ ಸಾಹಿತ್ಯ ಕೃಷಿಗಳ್‌ಂದ ಸಾರಸತ್ವ ಲೋಕದ ನಕ್ಷತ್ರ ನಂಗೆ ಹೊಳ್ದವೆ.

ಕಥೆ, ಕವನ, ಕಾದಂಬರಿ, ಜಾನಪದ ರೂಪಕ, ಅನುವಾದ ನಾಟಕ, ಅರೆಬಾಸೆ ನಾಟಕ, ತುಳು ನಾಟಕ, ಯಕ್ಷಗಾನ ಹಿಂಗೆ ಹಲವಾರ್ ಸಾಹಿತ್ಯ ಪ್ರಕಾರಗಳ ಪುಸ್ತಕನ ಹೊರತಂದೊಳೊ.

ಕಣ್ ಕನಸು ತೆರೆದಾಗ, ಚಿಕಿತ್ಸೆಯ ಹುಚ್ಚು ಮತ್ತೆ ಇತರೆ ಕತೆಗಳು (1954), 1950 ರ್ಲಿ ಹೊಸ ಕೆರೆ ಹೊನ್ನಮ್ಮ ತೇಲೋ ನೇಜಿ ಹಾಡ್‌ನ ಸಂಗ್ರಹ ಮಾಡ್ದೊ. ಕಾಡಮಲ್ಲಿಗೆ, ಹೊಸತುಕಟ್ಟು, ಕುಡಿಮಿಂಚು, ಪ್ರಗತಿಯ ಕರೆ ಪದ್ಯ ಪುಸ್ತಕಗ, ಅಬ್ಬಿಯ ಮಡಿಲು (ಕಾದಂಬರಿ), ಜೀವದಯಾಷ್ಟಮಿ (ತರ್ಜುಮೆ), ಧಾರಾ ಪಯಸ್ವಿನಿ (ಸುಳ್ಯದ ಲೇಖಕರ ವಿಳಾಸ ಸಂಕಲನ), ನಂದಾದೀಪ, ಶ್ರೀಮತಿ ಶಿವಕುಮಾರಿ, ಕೇರಳಕುಮಾರಿ, ಸಖಿ, ಅಚ್ಚರಿಯ ಅರಳೆಲೆ, ಮಾಧ್ಯಮಾ ನಾಟಕಗ, ಇನ್ಸೂರಳಿಯ ಹಾಸ್ಯ, ಬೊಳ್ಪಾಕನ ಮುಗ್ತ್ ಅರೆಬಾಸೆ ನಾಟಕ.

ಮುಕುಚೋರು ಭಂಗ ಸಾವಿತ್ರಿ ಛಂದೋನಾಟಕಗ, ಗುರುವನ ಗುಡಿ, ಸೊನ್ನೆಯಿಂದ ಸೊನ್ನೆಗೆ, ಹೃದಯ ರೂಪಕ ಗೀತರೂಪಕಗ, ಸಿಡಿಲ ಮರಿ ಅಶ್ವತ್ಥಾಮನ್ ಮತ್ತು ಮೋಹನ ಮುರಳಿ ಖಂಡಕಾವ್ಯಗ ಪ್ರಥಮ ಸ್ವಾತಂತ್ರ್ಯ ಯಕ್ಷಗಾನ ಪ್ರಸಂಗ ಪುಸ್ತಕಗಳ ಹೊರತಂದೊಳೊ.

ಮುಡೂರು ಮಾಸ್ಟ್ರು ಆಕಾಶವಾಣಿಗೆ ಹುತ್ತದಲ್ಲಿ ಹೂ, ದಯೆಯದಾಂಗುಡು, ಅಮರಕಲ್ಯಾಣಕ್ರಾಂತಿ ನಾಟಕನ ಬರ್ದೊಳೊ. ತುಳುಲಿ ಕೆಲ್ಸ ಮಾಡಿ ಜಾಗೀರ್‌ದಾರ್ ಜಗ್ಗೆ, ಗ್ಯಾಜವೇಟ್ ಗಿರಿಜ, ಸೀನನ ಸಿನೆಮೋ, ಗತ್ಕಾಂಡರೊಟಿ– ತೆಲ್ಯಾಂಡತೆಲ್ಲಾವು, ದೂರೊದ ಕುಕ್ಕು– ಮುಟ್ಟದ ಅಂಬಟೆ, ಗಡಿ ಬಿಡಿ ಗಂಗಯ್ಯ, ಕೆಡ್ಡಸೋ, ಬಲಿ ಪರ್ಬೊ, ಜೋಕುಳೆ ಬುದ್ದಿ ನಾಟಕಗ ಬಾರೀ ದೊಡ್ಡ ಹೆಸ್ರ್ ಮಾಡಿಯೊಳೊ.

ಮಾಸ್ಟ್ರಾಗಿ ಸಾಹಿತ್ಯ ರಚನೆನ ಒಟ್ಟೊಟ್ಟಿಗೆ ಸಂಘಟನೆಲಿ ಸ ತೊಡಗಿಸಿಕಂಡ್ ಸಂಗಮ ಸಾಹಿತ್ಯ ಮಾಲೆನ ಕಲ್ಮಡ್ಕಲಿ ಸ್ಥಾಪನೆ ಮತ್ತೆ ಪಂಜಲಿ ಪ್ರತಿಮಾ ಬಳಗ ಸುರು ಮಾಡಿ ಪುಸ್ತಕಗಳ ಪ್ರಕಟಿಸಿಯೊಳೊ. ಅಜ್ಜಾವರಲಿ ಗೀತಾ ಪ್ರಕಾಶನ, ಬೆಳ್ತಂಗಡಿಲಿ ಕಾಜಾಣ ಪ್ರಕಾಶನ ಮಾಡ್ಕಂಡ್ ಸಾಹಿತ್ಯ ಸೇವೆನ ಬಿತ್ತಿಯೊಳೊ. ಪಂಜಲಿ ಟಿ.ಜಿ ಮಾಸ್ಟ್ರೊಟ್ಟಿಗೆ ಸಚ್ಚಿದಾನಂದಯ್ಯ, ಕೆರೆಕ್ಕೋಡಿ ಗಣಪತಿ ಭಟ್ರ್ ಸೇರಿಕಂಡ್ ಸಂಗಮ ಕಲಾ ಸಂಘ ರಚನೆಯಾಗಿ ಈಗಲೂ ಯಕ್ಷಗಾನ ಸೇವೆ ಮಾಡ್ತಾಉಟ್ಟು.

ದ.ಕ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸುಳ್ಯ ತಾಲೂಕು ಘಟಕದ ಅಧ್ಯಕ್ಷರಾಗಿ ಮೂರು ವರ್ಷ ಕೆಲ್ಸ ಮಾಡ್ದೊ, ಅರಂತೋಡು ಸಾಹಿತ್ಯ ಸಮ್ಮೇಳನದ ಅದ್ಯಕ್ಷರೂ ಆಗಿದ್ದೊ. ಮುಡೂರು ಅವು ಹುಟ್ಟಿದ ಊರುನೊಟ್ಟಿಗೆ ಕೆಲ್ಸಲಿ ಹೋದಲೆಲ್ಲಾ ಸಾಹಿತ್ಯ ಬೀಜನ ಬಿತ್ತಿಯೊಳ. ಸಾಹಿತ್ಯ ಸಂಸ್ಕೃತಿನ ಬೆಳ್ಸಿಕೆ ವೇದಿಕೆ ಸೃಷ್ಟಿಸಿಯೊಳೊ ಹಿಂಗಾಗಿ ಮುಡೂರು ಬೆಳ್‌ದ ಊರೆಲ್ಲಾ ಬೆಳ್ಸಿಯೊಳ. ಅವರ ಅಮೃತ ಮಹೋತ್ಸವ ಸಂದರ್ಭಲಿ 'ನಂದಾದೀಪ' ಅಭಿನಂದನಾ ಪುಸ್ತಕನ ಅಭಿಮಾನಿ ಬಳಗ ಅರ್ಪಿಸಿಯೊಳ.

ಇವು ಬೇರೆ ಬೇರೆ ನಿರ್ದೇಶನನ ಮಾಡಿ ಕಲಾವಿದರ ಹುಟ್ಟಿಗೂ, ಸಾಹಿತ್ಯದ ತಿಳುವಳಿಕೆ ಕೊಟ್ಟು ಸಾಹಿತಿಗಳ ಹುಟ್ಟಿಗೂ ಕಾರಣ ಆಗೊಳೊ. ಈ ಇಳಿ ವಯಸ್‌ಲೂ ಯಾರೇ ಹೋದರೂ ಯವ್ವನದ ಹುರುಪ್‌ಲಿ ಮಾರ್ಗದರ್ಶನ, ಮಾಹಿತಿ ಕೊಡುವ ಕ್ರಿಯಾಶೀಲತೆ ಹೃದಗಳಿಗೆ ಮಾದರಿ ಆದೆ.

ಹಿಂಗೆ ಸಾಹಿತ್ಯ ರಚನೆ, ಪ್ರಕಟನೆ, ಸಂಘಟನೆ, ಮಾತ್ರ ಅಲ್ಲದೆ ಸುಮಾರ್ ಬೇರೆ ಬೇರೆ ನಾಟಕಗಳ ನಿರ್ದೇಶಿಸಿ ಕಲಾವಿದರ ಹುಟ್ಟಿಗೂ, ಸಾಹಿತ್ಯದ ತಿಳುವಳಿಕೆ ಕೊಟ್ಟ್ ಸಾಹಿತಿಗಳ ಹುಟ್ಟಿಗೂ ಕಾರಣ ಆಗೊಳೊ. ಟಿ.ಜಿ ಮುಡೂರು ಅವರ್‌ದ್ ಸಾಹಿತ್ಯ ಲೋಕಕ್ಕೆ ದೊಡ್ಡ ಉಡುಗೊರೆ. ಯಾವುದೇ ಪ್ರಶಸ್ತಿ ಸ್ಥಾನಮಾನಗಳ ಹಂಬಲ ಇಲ್ಲದೆ ಕೆಲ್ಸಲೇ ತೃಪ್ತಿ ಪಡುವ ಟಿ.ಜಿ ಮಾಸ್ತರಿಗೆ ಗುತ್ತಿಗಾರು ಕಿರಣ ರಂಗ ಅಧ್ಯಯನ ಸಂಸ್ಥೆ ವತಿಂದ ರಾಜ್ಯ ಮಟ್ಟದ ಕಿರಣ ಪ್ರಶಸ್ತಿ ಕೊಡಿಕೆ ನಿರ್ಧರಿಸುಟ್ಟು. ಇವ್ಕೆ ಕರ್ನಾಟಕ ಅರೆಭಾಷೆ ಸಾಹಿತ್ಯ ಮತ್ತು ಸಂಸ್ಕೃತಿ ಅಕಾಡೆಮಿ ಕಡೆಂದ ಆಚೆ ವರ್ಷ ಇವರ ಸಾಧನೆನ ಗುರ್ತ್‌ಸಿ ಪ್ರಶಸ್ತಿನ ನೀಡೊಳೊ. ಹಿಂಗೆ ಬೇರೆ ಬೇರೆ ಸನ್ಮಾನಗ, ಪ್ರಶಸ್ತಿನ, ಇವರ್ನ ಹುಡ್ಕಿಕಂಡ್ ಬಂದುಟು. ಇಂತಹವರ ಒಡನಾಟಲಿ ಇರುವ ನಾವೆಲ್ಲಾ ಧನ್ಯರು.

ನೆರಳ್ ಮತ್ತೆ ನೆಂಪು

–ಹರ್ಷಿತ ಕೇಶವ ಪೇರಿಯನ

ಬಾರದಿರ್ ನೆರಳೇ ನನ್ನ ಹಿಂದೆ
ನೀ ಬಂದರೆ ಹಿಂದೆ
ಬಂದದೆ ನೆಂಪು ತೇಲೋ ಕುಣಿಕೆ ಕಣ್ಣ್‌ಮುಂದೆ
ಎಲ್ಲಿ ಹೋದರೂ, ಎಲ್ಲಿ ಬಂದರೂ
ಬೆನ್ನ್ ಬುಡದೆ ಭೂತ ಆಗಿ ಬಾರದಿರು
ಎಲ್ಲಿ ಕುದ್ದರೂ, ಎಲ್ಲಿ ನಿಂತರೂ
ನನ್ನನೇ ನುಂಗುವ ಕಷ್ಟಕಾರ್ಮೋಡ ಆಗದಿರ್
ಒಮ್ಮೆಲೇ ಸಣ್ಣ ಕೂಸಾಗಿ ಕಡೆಗೆ
ನನ್ನಕ್ಕಿಂತ ದೊಡ್ಡ ಆಕಾರಲಿ ಬೆಳ್ದ್ ಬುಟ್ಟದೆ
ಸಾಕ್ ನಿಲ್ಸ್ ಈ ಕಣ್ಣಾಮುಚ್ಚಾಲೆ ಆಟನ
ಬುಟ್ಟು ಬುಡ್ ನನ್ನ ಪಾಡಿಗೆ ನನ್ನ
ಎಂದೆಂದಿಗೂ ಬಾರದಿರು ನೆರಳೇ ನನ್ನ ಹಿಂದೆ
ತಾರದಿರು ನೆಂಪುಗಳ ಕುಣಿಕೆ ಕಣ್ಣ ಮುಂದೆ

ಹೆತ್ತವರ ಋಣ ತೀರ್ಸುದು ಹೆಂಗೆ?

–ಉಳುವಾರನ ರೋಶನ್ ವಸಂತ್

ಇಂದ್ ನಾವೆಲ್ಲವೂ ಇಲ್ಲಿ ಲಾಯಿಕ್ಕಾಗಿ ಇರಿಕೆ ನಮ್ಮ ಹೆತ್ತವು ಮುಖ್ಯ ಕಾರಣ. ಒಂದು ಕೂಸು ಹುಟ್ಟಿ ಅದ್ ಬೆಳ್‌ದ್ ಒಂದು ಹಂತಕೆ ಬಾಕೆ ಅಪ್ಪ–ಅವ್ವನೇ ಕಾರಣ. ಕಷ್ಟಪಟ್ಟ್ ಒಂಭತ್ತ್ ತಿಂಗ ಹೆತ್ತ್, ಹೊತ್ತ್, ವಿದ್ಯಾ, ಬುದ್ಧಿ ಕೊಟ್ಟ್ ಸಾಕಿ ಸಲ್‌ಗಿದ ನಮ್ಮ ಹೆತ್ತವೇ ನಿಜವಾದ ದೇವರ್‌ಗ.

ಈ ಲೋಕಲಿ ಬೆಲೆ ಬಾಳುವ ಸುಮಾರ್ ವಸ್ತುಗಳ ದುಡ್ಡು ಕೊಟ್ಟ್ ತಕಣಕ್. ಆದರೆ ಅಪ್ಪ–ಅವ್ವನ ತಕಣಿಕೆ ಸಾಧ್ಯ ಇಲ್ಲೆ. ನಮ್ಮನ ಹೆತ್ತ್ ಒಂದು ಆಕಾರ ಕೊಟ್ಟ್ ಬೆಳ್‌ಸಿ ಹುಟ್ಟದಂಗೆ ಸಂಭ್ರಮಪಟ್ಟ್ ಹುಟ್ಟಿದ ಗಳಿಗೆ ನೋಡಿ ಜಾತಕ ಬರ್‌ಸಿ ಪೊರ್ಲ್‌ನ ಅರ್ಥಪೂರ್ಣ ಹೆಸ್‌ರ್ ಹಾಕಿ ನಮ್ಮನ್ನೆಲ್ಲ ಬೆಳ್‌ಸಿಯೊಳೊ. ಒಬ್ಬ ಶಿಲ್ಪಿ ಒಂದ್ ಕಲ್ಲ್‌ನ ಕೆತ್ತಿ ಅದ್ಕೆ ರೂಪ ಕೊಟ್ಟ್ ಕೆತ್ತಿದಂಗೆ, ಒಬ್ಬ ಕುಂಬಾರ ಮಣ್ಣ್‌ನ ಮುದ್ದೆನ ತಕಂಡ್ ಆಕಾರ ಕೊಟ್ಟ್ ರೂಪ ಬರ್‌ವಂಗೆ ನಮ್ಮ ಹೆತ್ತವು ಮನೆನೇ ಸುರುನ ಪಾಠ ಶಾಲೆತ ಹೇಳುವಂಗೆ ಮನೆಲಿ ಕಲ್‌ಸುವ ವಿಧ್ಯೆಕೊಟ್ಟ್ ನಾವ್ಗೆ ಸರಿ– ತಪ್ಪುಗಳ ತಿಳ್ಸಿವೆ ತಪ್ಪಿದ್ದರೆ ಬೈದ್ ತಿದ್ದಿ ನಮ್ಮ ಒಂದು ಹಂತಕ್ಕೆ ತಂದವೆ. ಮನೆ ಪಾಠ ಕಲ್ಸಿ ಶಾಲೆಗೆ ಸೇರ್ಸುವೆ. ಅಲ್ಲಿ ಗುರುಗ ನಮ್ಮ ಜೀವನಕ್ಕೆ ಬೇಕಾದ ವಿದ್ಯೆನ ಕೊಟ್ಟ್ ಒಂದು ರೂಪಕೆ ತಂದವೆ. ಹೆತ್ತವು ನಮ್ಮ ಮಕ್ಕ ಯಾಗೊಳು ಲಾಯ್ಕ ಸುಖಲಿ ಇರ್ಲಿ. ನಾವು ಪಟ್ಟ ಕಷ್ಟನ ಅವು ಪಡ್ದು ಬ್ಯಾಡ. ಆದಷ್ಟ್ ಓದಿ ಒಂದು ಚಾಕೆರಿಗೆ ಸೇರಲಿ. ಒಳ್ಳ ಹೆಸ್‌ರ್ ತರ್ಲಿತ ಆಸೆ ಪಟ್ಟ್‌ಕಂಡ್. ಕೈಲಿದ್ದ ದುಡ್ಡುನ ಎಲ್ಲಾ ವಿದ್ಯೆಗೆ ಹಾಕಿ ಹೊಟ್ಟೆ ಬಾಯಿ ಕಟ್ಟಿಕಂಡ್ ಓದ್‌ಸಿ ಚಾಕೆರಿಗೂ ಸೇರ್ಸುವೆ. ಹೆತ್ತವರ ಆಸೆ ಯಾಗೊಳು ನಮ್ಮ ಮಕ್ಕ ಲಾಯ್ಕ ಇರ್ಲಿ, ಅವೇ ನಾವ್ಗೆ ಆಸ್ತಿ ತ ಗ್ಯಾನ ಮಾಡಿವೆ.

ಇನ್ನ್ ಮದುವೆ ವಯಸ್ಸಿಗೆ ಬಾಕನ ಒಳ್ಳ ಹೈದ, ಒಳ್ಳ ಗೂಡೆನ ನೋಡಿ ಮದುವೆ ಮಾಡಿವೆ. ನಾವು ಎಂತ ಮಾಡ್‌ರೂ ಎಷ್ಟೆ ಕಷ್ಟ ಪಟ್ಟರೂ ಅವರ ಋಣನ ತೀರ್ಸಿಕೆ ಸಾಧ್ಯ ಆದುಲೆ. ಆದಷ್ಟ್ ಅವರ ಮನ್‌ಸ್‌ನ ನೋಯಿಸದೆ ಅವರ ನೋಡಿಕಣಕು. ಎಂತಾರ್ ಅವು ಹೇಳ್ರೆ ತಿರ್‌ಗಿ ಜವಾಬ್ ಕೊಡಕಾದ್. ಹಂಗೆ ಮಾಡದೆ ದೊಡ್ಡವು ಹೇಳ್ದು ನಮ್ಮ ಒಳ್ಳೆದಕ್ಕೆ ತ ನಾವು ತಿಳ್ಕಣಕು.

ಮಾತೃದೇವೋ ಭವ, ಪಿತೃದೇವೋಭವ, ಗುರು ದೇವೋಭವತ ಹೇಳುವಂಗೆ ಇವು ಮೂರು ಜನ ನಮ್ಮ ಪಾಲ್‌ನ ನಿಜವಾದ ದೇವರುಗ. ಇಂದ್ ನಾವು ನೋಡ್ತಿರುವಂಗೆ ಜನ ಮಕ್ಕ ಹೆತ್ತವರ್‌ನ ಕಣ್ಣೀರ್ ಹಾಕ್‌ಸುದು ಜಾಸ್ತಿ ಆಗುಟು.. ಇದ್ ಸರಿ ಅಲ್ಲ. 'ಮಾತಾಪಿತರನ್ನ ಬಳಲಿಸಿದಾತನು ಯಾತ್ರೆಯ ಮಾಡಿದರೇನು ಫಲ' ತ ಹೇಳುವಂಗೆ ಅಪ್ಪ–ಅವ್ವನ ಸರಿಯಾಗಿ ನೋಡಿಕಣದೆ ಯಾತ್ರೆ, ಪೂಜೆ, ಹೋಮ, ಹವನ ಮಾಡ್‌ರೆ ಏನು ಪ್ರಯೋಜನ ಇಲ್ಲೆ. ಹೆತ್ತವ್ಕೆ ಎಷ್ಟೇ ಕಷ್ಟ ಇದ್ದರೂ ಅಯ್ಯೋ ನಮ್ಮ ಮಕ್ಕತ ಹೇಳಿಕಂಡ್ ಕೈ ತುತ್ತು ಕೊಟ್ಟ್ ಪ್ರೀತಿ ತೋರ್‌ಸಿ ಆರೋಗ್ಯ ಸರಿಯಿಲ್ಲದಿರ್ಕನ ಆಸ್ಪತ್ರೆಗೆ ಹೆಗ್ಲ್ ಮೇಲೆ ಹಾಕಂಡ್ ಹೋಗಿ ಮೊದ್ದ್ ಕೊಡ್‌ಸಿ ನಮ್ಮ ಸಾಕಿ ಬೆಳ್‌ಸಿ ಈ ಹಂತಕ್ಕೆ ತಂದೊಳೊ.

ಇಂದ್ ಕಾಲ ಬದ್‌ಲಾಗುಟ್ಟು ಪಂಡ್ ಕಾಲಲಿ ಹತ್ತ್ ಮಕ್ಕಳ ಹೆತ್ತವು ಕಷ್ಟಪಟ್ಟ್ ಸಾಕ್‌ತಿದ್ದೊ. ಆದರೆ ಇಂದ್‌ನ ಕಾಲಲಿ ಅದೇ ಹೆತ್ತವರ ಹತ್ತ್ ಮಕ್ಕ ಸೇರಿಕಂಡ್ ಸಾಕಿಕೆ ಹಿಂದೆ ಮುಂದೆ ನೋಡುವ ಕಾಲ ಬಂದುಟ್ಟು. ಇದ್ ಸರಿಯಲ್ಲ, ವಯಸ್ಸಾದ ಕಾಲಲಿ ನಮ್ಮ ಆರೈಕೆಗೆ ಮಕ್ಕ ಇರ್‌ಲಿತ ಅವು ಪಟ್ಟ ಕಷ್ಟನ ನಾವು ಗ್ಯಾನ ಮಾಡಿಕಣಕು.

ಅರವತ್ತು ವಯಸ್ಸ್ ದಾಟಿದ ಮೇಲೆ ಅರ್‌ಳೋ ಮರ್‌ಳೋತ ಹೇಳುವಂಗೆ ಊರು ಹೋಗು, ಕಾಡ್ ಬಾತ ಕರಿತ ಇದ್ದದೆ. ಇಂದ್ ನಾವು ಅವರ್‍ನ ನೋಯಿಸಿರೆ ನಾವ್ಗೆ ಸ ಒಂದು ಕಾಲ ಉಟ್ಟು. ನಾವ್ಗೂ ವಯಸಾಕನ

ನಮ್ಮ ಮಕ್ಕಳೂ ಹಿಂಗೆ ಮಾಡ್‌ವೊತ ಹೇಳ್‌ದ್‌ನ ನಾವು ಚಿಂತನೆ ಮಾಡೊಕು. ನಾವು ಹಂಗೆ ಮಾಡ್ರೆ ನಾವ್ಗೂ ಕಟ್ಟಿ ಮಡ್ಗಿದ ಬುತ್ತಿ.

ಇಂದ್ ನಾವ್ ನೋಡುವಂಗೆ ಎಷ್ಟೋ ಕಡೆಗಳ್ಲಿ ಹೆತ್ತವು ಬೀದಿಗೆ ಬೀಳ್ತಾ ಒಳೊ. ಕಷ್ಟಪಟ್ಟ್ ಮಕ್ಕಳ ಹೊರಗೆ ಚಾಕರಿಗೆತ ಕಳ್ಸಿರೆ ಅವು ಅಲ್ಲಿಯೇ ಅವ್ಕೆ ಇಷ್ಟ ಆದ ಗೂಡೆನ ನೋಡಿ ಮದ್ವೆ ಆದು. ಇಲ್ಲೆ ಹೆತ್ತವರ ಮಾತ್‌ನ ಮೀರಿ ಮದ್ವೆ ಆದು ಎಲ್ಲಾ ನಡೀತಾ ಉಟ್ಟು. ಹೊರಗಡೆ ಚಾಕರಿಗೆ ಹೋದವು ಪ್ಯಾಟೆ ಸಂಸ್ಕೃತಿಗೆ ಒಗ್ಗಿ ಹೋಗಿ ಹಳ್ಳಿ ಸಂಸ್ಕೃತಿನ ಮರ್ತವೆ. ಇದರ್‌ಂದ ಪದ್ದತಿ ಸಂಸ್ಕೃತಿ ಸಹ ಕೈ ಬುಟ್ಟ್ ಹೋದೆ. ನಾವು ಹೇಳ್‌ದೆ ಸರಿ ತ ನಡ್ಕಂಡ್ ಹೆತ್ತವರ ಕಣ್ಣೀರ್ ಹಾಕ್ಸಿವೆ. ಅವರ ಸರಿಯಾಗಿ ನೋಡಿಕಣದೆ ಹೇಳ್‌ದ ಮಾತ್ ಕೇಳದೆ ವೃದ್ಧಾಶ್ರಮಗಳಿಗೂ ಸೇರ್‌ಸುವ ಕಾಲ ಬಂದುಟ್ಟು ಇದ್ ಸರಿಯಲ್ಲ.

ಪ್ರಕೃತಿ ನಿಯಮದಂಗೆ ಸಣ್ಣದರ್‌ಲಿ ಇರ್‌ಕಾಕನ ನಾವ್ಗೆ ಅವು ಆಸರೆ ಆಗಿ ಇದ್ದವೆ. ನಾವು ದೊಡ್ಡವಾದ ಮೇಲೆ ಅವ್ಕೆ ವಯಸ್ಸಾದ ಕಾಲಲಿ ನಾವು ಆಸರೆ ಆಗಿ ನಿಲ್ಲೊಕು. ಅವ್ಕೆ ವಯಸ್ಸಾದಂಗೆ ನಮ್ಮ ಒಳ್ಳೆದಕ್ಕೇ ಅವು ಬಯಸಿಕಂಡ್ ಕಾಲ ಕಳಿಯಕೆ ನೋಡಿವೆ. ಈ ಲೋಕಲಿ ಎಂತ ಮಾಡ್ರೂ ಹೆತ್ತವರ ಋಣನ ತೀರ್ಸಿಕೆ ಸಾಧ್ಯ ಆದುಲೆ. ಅವರ ಲಾಯಿಕ್ಕಲಿ ಪ್ರೀತಿಂದ ನೋಡಿಕಂಡ್ ಅವರ ಬೇಕು-ಬೇಡಗಳ್‌ನ ಈಡೇರಿಸಕಂಡ್ ಹೋಕು. ಅವರ ಸರಿಯಾಗಿ ನೋಡಿಕಣದೆ ಕಣ್ಣೀರ್ ಹಾಕ್ಸಿರೆ ಅವು ಹಾಕುವ ಒಂದು ಹನಿ ಕಣ್ಣೀರ್ ನಾವ್ಗೆ ನಮ್ಮ ಜೀವನಕ್ಕೆ ಶಾಪ ಆದೆ. ಆ ಶಾಪಂದ ಏಳಿಗೆ ಆದು ಕಷ್ಟನೇ.

ಈ ಲೋಕಲಿ ಏನ್ ಮಾಡ್ರೂ ಹೆತ್ತವರ, ವಿದ್ಯೆಕಲ್ಸಿದ ಗುರುಗಳ ಋಣ ತೀರ್ಸುದು ಬಾಳ ಕಷ್ಟನೇ, ಇವೇ ನಿಜವಾದ ದೇವರುಗ. ನಮ್ಮ ಹಿರಿಯವರ್‌ನ, ವಿದ್ಯೆ ಕೊಟ್ಟ ಗುರುಗಳ್‌ನ, ಜನ್ಮಕೊಟ್ಟ ಅಪ್ಪ-ಅವ್ವನ ಗೌರವಿಸುನೊ. ಅವರ ಹೆಸರ್ ಕೀರ್ತಿನ ಹಾಳ್ ಮಾಡ್ದು ಬೇಡ. ಅವ್ಕೆ ಇನ್ನೂ ಒಳ್ಳ ಹೆಸ್ರ್‌ನ ತರ್‍ನೊ. ಅವರ ಲಾಯಿಕ್ಕಾಗಿ ನೋಡಿಕಂಡ್ ಅವರ ಆಶೀರ್ವಾದಂದ ಜೀವನಲಿ ಮುಂದೆ ಹೋಕೆ ಪ್ರಯತ್ನ ಪಡ್ನೊ.

ಬಾಳ ಹತ್ತಿರ ಇದ್ದವೆ, ಆದರೂ ದೂರ ಇದ್ದವೆ

-ಗಣೇಶ್ ಸಹ್ಯಾದ್ರಿ.

ಇಬ್ಬರ ಆಲೋಚನೆಗ ಸ ಒಂದೇ ಆಗಿತ್. ಇಬ್ಬರ ಅಭಿಪ್ರಾಯ ವ್ಯಕ್ತ ಆತ್. ನಿನ್ನಲಿ ನಾನಾಗಿ, ನನ್ನಲಿ ನೀನಾಗಿ ದಿನ ಕಳ್ತ್. ಆದರೆ ಒಮ್ಮೆ ಸ ಇಬ್ಬರ್ ಮುಖಾ-ಮುಖಿ ಆತ್ಲೆ. ಕಾಲೇಜ್ ತೇಲ್ದ ಮೇಲೆ ಪ್ರೀತಿ-ಗೀತಿ ಮಾಮೂಲಂಗೆ ನಾನು ಸಣ್ಣ ರೀತಿಲಿ ಇನ್ನೊಬ್ಬರ ಸ್ನೇಹ ಬಯಸಿದೆ. ಬಯಸಿದಂಗೆ ಸ್ನೇಹ ಸಿಕ್ಕಿತ್ ಇಬ್ಬರ ವಿಚಾರ ಕಾಲ ಕ್ರಮೇಣ ವ್ಯಕ್ತ ಆಕಂಡ್ ಹೋತ್. ಕಡೆಗೆ ಅದ್ ಪ್ರೀತಿ ಆಗಿ ರೂಪ ತಾಳ್ತ್. ಆದರೆ ಒಮ್ಮೆ ಸ ಇಬ್ಬರೂ ಎದುರ್ ನಿಂತ್ ಮಾತಾಡ್‌ತ್ಲೆ. ಸಾವಿರ ಸಲ ಸಿಕ್ಕು ತೇಳ್ರೂ ಅವರ ಉತ್ತರ ಒಂದೇ 'ನನ್ನ ಫ್ರೆಂಡ್ಸ್ ಇದ್ದವೆ ಅವು ಏನಾದ್ರ್ ತಪ್ಪು ತಿಳ್ಕಂಡವೆ, ನಂಗೆ ನಿನ್ನ ಎದ್‌ರ್ ನಿಂತ್ ಮಾತಾಡಿಕೆ ಹೆದ್ರಿಕೆ'. ಯಾಗ ಕೇಳ್ರೂ ಒಂದೇ ಉತ್ತರ. ನನ್ನ ಹಣೆಬರಕ್ಕೆ ಅವಳ ಫ್ರೆಂಡ್ಸ್ ಎಲ್ಲವೂ ಒಂದೇ ಊರಿನವು. ಇದೇ ನಂಗೆ ದೊಡ್ಡ ಸಮಸ್ಯೆ ಆದ್ ಅವು ಎಲ್ಲಾರ್ ನಮ್ಮಿಬ್ಬರ ನೋಡ್ರೆ ಊರ್‌ಲೆಲ್ಲಾ ದೊಡ್ಡ ಪ್ರಚಾರ ಆದೆ. ಆಗ ನನ್ನ ಕಾಲೇಜ್‌ಂದನೇ ಬುಡ್ಸಿವೆ ತ ಅವ್ಳ್‌ಗೆ ಭಯ. ಹಂಗೆ ನಮ್ಮ ಸಂಭಾಷಣೆ ಮೊಬೈಲ್‌ಗೆ ಮಾತ್ರ ಸೀಮಿತ ಆಗಿತ್. ಆದರೂ ಒಂತರ ಖುಷಿ ದೂರಲಿ ಕಾಂಬಕನ ಒಂದ್ ಸಣ್ಣ ನಗೆ ಬೀರ್ದ್ರೆ ಆಗ ನನ್ನಲಿರೋ ಕೋಪ ಎಲ್ಲ ಹಾರಿ ಹೋದೆ. ಅವಳ ಕಷ್ಟನ ಅರ್ಥ ಮಾಡಿಕಂಡ್ ಕೆಲವ್ ಸಲ ಸುಮ್ಮನೆ ಇದ್ದನೆ. ಆದರೆ ಕಾಲೇಜ್ ಸುತ್ತ-ಮುತ್ತ ಬೇರೆ ಹಕ್ಕಿಗ ಹಾರಾಡ್ದು ನೋಡ್ಕನ, ನನ್ನ ಹಕ್ಕಿಗೆ ಯಾಗ ರೆಕ್ಕೆ ಬಂದದೆನೋ ನಾವು ಯಾಗ ಬೇರೆಯವರಂಗೆ ಹಾರಾಡುವೆವೋ ತ ಆಸೆ ಪ್ರತಿ ಸಲ ಮನ್ಸ್‌ಲಿ ಹೂವರಳಿ ಬಾಡಿ ಹೋಗ್ತಾ ಇದ್ದದೆ. ಕಾಲ ಉರುಳುತ್ತಾ ಉಟ್ಟು... ಮುಂದೆ ಸ ಹಿಂಗೆ ಆದಗೆ ನನ್ನಾಸೆ ಕೈಗೂಡಲಿ.

ಹತ್ತು ಕುಟುಂಬ ಹದಿನೆಂಟು ಗೋತ್ರದ ದೈವಾಧೀನರಾದವರ ವಿವರ

ಹೆಸ್ರ್	ವಯಸ್	ತೀರ್ದ ತಾರೀಖ್	ಹೆಸ್ರ್	ವಯಸ್	ತೀರ್ದ ತಾರೀಖ್
ಚಾಂಗನ ಕೆಂಚಪ್ಪ	101	18–5–2018	ಕಲ್ಲುಮುಟ್ಲು ಮೊಣ್ಣಪ್ಪ	73	24–6–2018
ಪುದಿಯಮನೆ ಪದ್ಮನಾಭ	68	18–5–2018	ನಡುಮನೆ ಸೀತಮ್ಮ	76	29–6–2018
ಕೋಡಿ ಬಾಬು	95	24–5–2018	ಪಾರೆಮಜಲು ಲಲಿತಾ (ರಾಧ)	70	30–6–2018
ಪೂಜಾರಿರ ರಮೇಶ್	65	24–5–2018	ಬಿಟ್ಟೀರ ಶಶಿ (ಪೊನ್ನಪ್ಪ)	40	1–7–2018
ಪರ್ಲಕೋಟಿ ಲಿಂಗಪ್ಪ (ಲಾಲು)	72	25–5–2018	ಪಾಂಡಿಮನೆ ಸೀತಮ್ಮ	85	1–7–2018
ಕೆಮ್ಮಾರನ ಅಶೋಕ	57	25–5–2018	ಗೋವಿಂದಮ್ಮನ ಅಪ್ಪಣ್ಣ	74	1–7–2018
ಕೊಟ್ಟಕೇರಿಯನ ಸೋಮಣ್ಣ	69	25–5–2018	ಉದಿಯನ ಗಣಪತಿ	81	4–7–2018
ಕರೆಮನೆ ಕಾವೇರಮ್ಮ	90	27–5–2018	ಮತ್ತಾರಿ ಸಣ್ಣಯ್ಯ	78	6–7–2018
ಕುಲ್ಲಚೆಟ್ಟಿರ ತೇಜ	31	27–5–2018	ಕೇಚಪ್ಪನ ಸುರೇಂದ್ರ (ಹರಿ)	50	6–7–2018
ಕಾವೇರಿಮನೆ ಗೋಪಾಲ	56	28–5–2018	ಪೂವಣಿ ಜಾಜಮ್ಮ	67	8–7–2018
ಮೂಟೇರ ಚಂಗಪ್ಪ	78	29–5–2018	ಸೂದನ ನಂಜುಂಡ	87	8–7–2018
ಅರಂಬೂರು ಗಣಪತಿ	63	29–5–2018	ಕರಕರನ ಪೂವಯ್ಯ	85	11–7–2018
ಕುಲ್ಲಚೆಟ್ಟಿರ ಬಿದ್ದಪ್ಪ	73	29–5–2018	ಕೋಳಿಮಾಡು ಪೂವಯ್ಯ	72	13–7–2018
ಪೊಡನೋಳನ ಸೋಮಯ್ಯ	79	2–6–2018	ಹೊಸೊಕ್ಲು ಪಾರ್ಥ (ಪಾರ್ಥಿವ)	50	13–7–2018
ನೆರಿಯನ ಇಂದಿರಾ	67	5–6–2018	ನಂಗಾರು ಮಾಚವ್ವ	80	15–7–2018
ಕುಲ್ಲಚೆಟ್ಟಿ ನಾಣಯ್ಯ	64	8–6–2018	ಸಿರಕಜೆ ಮುತ್ತಪ್ಪ	90	15–7–2018
ಗೌಡುದಾರೆ ದೇವಮ್ಮ	72	11–6–2018	ಬಳ್ಳಡ್ಕ ಲೀಲಾವತಿ	12	18–7–2018
ಪಾಣತ್ತಲೆ ಚೆಟ್ಟಿಯಪ್ಪ	77	14–6–2018	ಗುತ್ತಿಮುಂಡನ ಪದ್ಮರಾಜ್	52	29–7–201
ಕಾಸ್ಪಾಡಿ ರಾಘವಯ್ಯ	78	14–6–2018	ಕೊಕ್ಕಲೆಮನೆ ಪೂವಮ್ಮ	85	831–
ಪರಿವಾರ ರಾಜ (ಕಾಶಿ)	48	15–6–2018	ನಂಗಾರು ತಂಗಮ್ಮ	65	7–2018
ಸೆಟ್ಟೆಜನ ಶರತ್	27	15–6–2018	ಪಾಂಡನ ಜಯಲಕ್ಷ್ಮಿ	98	31–7–2018
ಚೊಕ್ಕಾಡಿ ಮುತ್ತಮ್ಮ	87	19–6–2018	ತೋಟಂಬೈಲು ರುಕ್ಮಿಣಿ	87	4–8–2018
ಐಯೇಟಿ ಕಾವೇರಮ್ಮ	76	20–6–2018	ಕುದುಕುಳಿ ಅಕ್ಕಯ್ಯ	112	5–8–2018
ಕರಕರನ ಟಿ.ದೊಡ್ಡಯ್ಯ	75	20–6–2018	ಕಾಳೆಯಂಡ ಬೆಳ್ಯಪ್ಪ	69	5–8–2018
ಬಾಕಿಲನ ಪೂವಮ್ಮ	90	22–6–2018	ಕೂರನ ಕುಶಾಲಪ್ಪ (ಬಾಲು)	62	6–8–2018
ಊರೊಳನ ಗಣಪತಿ	80	22–6–2018	ಸೂದನ ಚರಣ್	33	6–8–2018
ಕುದುಪಜೆ ಹೊನ್ನಮ್ಮ	78	23–6–2018	ಊರುಬೈಲು ಗಣೇಶ್	31	8–8–2018

ಹೆಸ್ರ್	ವಯಸ್	ತೀರ್ದ ತಾರೀಖ್	ಹೆಸ್ರ್	ವಯಸ್	ತೀರ್ದ ತಾರೀಖ್
ಕುಟ್ಟನ ವೀಣಾ	25	10–8–2018	ಅಮ್ಮವ್ವನ ಬೋಜಮ್ಮ	74	14–9–2018
ಚೆಟ್ಟಿನೆರವನ ಕಾಮವ್ವ	75	10–8–2018	ಹೊಸೊಕ್ಲು ಜಾನಮ್ಮ	64	14–9–2018
ಕುಲ್ಲಚೆಟ್ಟಿ ರಾಮಚ್ಚ (ರಾಜ)	45	11–8–2018	ನೆಯ್ಯೇಣಿ ಚಿನ್ನಮ್ಮ	58	14–9–2018
ಕೋಳಿಬೈಲು ನಾಣಯ್ಯ	53	13–8–2018	ಕುಂಞಳಿಯನ ಸೀತಮ್ಮ	88	14–9–2018
ಅಚ್ಚಪಟ್ಟೀರ ಮಾಚಮ್ಮ	87	13–8–2018	ನಡುವಟ್ಟೀರ ಜಯಂತಿ	53	15–9–2018
ಕಲ್ಲುಮುಟ್ಲು ಜಾನಕಿ	85	19–8–2018	ಬೈತಡ್ಕ ಹೇಮಾವತಿ	67	15–9–2018
ಪರ್ಲಕೋಟಿ ಅಯ್ಯಪ	75	21–8–2018	ದಂಬೆಕೋಡಿ ಜೋಯಪ್ಪ	94	17–9–2018
ನಿಕ್ಕರೆ ಗೌರಮ್ಮ	65	21–8–2018	ಹೊಸೂರು ಮಾಯಮ್ಮ	77	20–9–2018
ತೊತ್ತಿಯನ ಜಯರಾಮ	61	22–8–2018	ಪೊಡನೋಳನ ಅಮರಾವತಿ	43	21–9–2018
ಕುಯ್ಯಮುಡಿ ಎ. ಉತ್ತಪ್ಪ	80	25–8–2018	ಉಳುವಾರು ಕುಶಾಲಪ್ಪ	91	22–9–2018
ಬಿದ್ರುಪಣೆ ಗಂಗಮ್ಮ	93	25–8–2018	ಗೌಡಕಲ್ಲಂಬಿ ಈರಪ್ಪ (ರಾಜು)	66	24–9–2018
ದೇವಜನ ಸುರೇಶ	56	29–8–2018	ಬೈತಡ್ಕ ಅಪ್ಪಣ್ಣ	90	24–9–2018
ಕುದುಪಜೆ ಅಯ್ಯಪ್ಪ	83	29–8–2018	ಅಂಚೆಮನೆ ಮಾದಪ್ಪ	85	24–9–2018
ಉಳುವಾರನ ಪ್ರತಾಫಿ	53	30–8–2018	ತೋಟಂಬೈಲು ಬೋಜಮ್ಮ	91	25–9–2018
ಮಾರ್ಪಡ್ಕ ದೇವಮ್ಮ	95	30–8–2018	ಕುಂಜಿಲನ ಮುದ್ದಯ್ಯ	90	25–9–2018
ಕುಂಬೇರ ಗಣೇಶ	63	30–8–2018	ತೊತ್ತಿಯನ ಅಪ್ಪಯ್ಯ (ವಾಸು)	53	27–9–2018
ಕರಕರನ ಬೋಜಮ್ಮ	73	30–8–2018	ಪಾಕಮುಕ್ಕಾಟಿ ಬಾಬಯ್ಯ	86	27–9–2018
ಪಾಂಡನ ಚಂದ್ರಮ್ಮ	73	2–9–2018	ಕಾಸ್ಪಾಡಿ ಅಪ್ಪಣ್ಣ	78	29–9–2018
ಬಿಟ್ಟೀರ ಕಾಮವ್ವ	93	3–9–2018	ಕುದುಕುಳಿ ಕೃಷ್ಣಪ್ಪ	76	29–9–2018
ಕೋಟೆಮನೆ ಸೀತಮ್ಮ	65	6–9–2018	ಕಾನಡ್ಕ ತಿಲಕ್‌ರಾಜ್ (ಚಂದ್ರು)	39	2–10–2018
ಬೊಳ್ಳುಮಾನಿ ಸುಕುಮಾರ	55	6–9–2018	ಉಳುವಾರನ ಆನಂದ	77	4–10–2018
ಕುದುಕುಳಿ ಅಮ್ಮವ್ವ	85	7–9–2018	ಪುದಿಯನೆರವನ ಬೆಳ್ಯಪ್ಪ	92	5–10–2018
ಪರ್ಲಕೋಟಿ ಪ್ರಕಾಶ	56	8–9–2018	ಪೆತ್ತಾಜೆ ದಾಸಪ್ಪ	63	6–10–2018

*ನಾವ್ಗೆ ಸಿಕ್ಕ ಮಾಹಿತಿ ಪ್ರಕಾರ ಇಲ್ಲಿ ಪ್ರಕಟಿಸಿಯೊಳೊ.
ಇನ್ನ್ ಮುಂದೆ ಯಾವುದಾದರ್ ಮಾಹಿತಿಗ ಇದ್ದರೆ ನಮ್ಮೊಟ್ಟಿಗೆ ಹಂಚಿಕಣಿ.

ಕನ್ಸ್‌ಗಳ ಬೆನ್ನತ್ತಿ

–ಮಿಥುನ್ ಚೀಯಪ್ಪನ

ನಾನ್ ಸುಮ್ಮನೆ ಹಂಗೆ ಫೇಸ್‌ಬುಕ್‌ಲಿ ಮಾಮೂಲ್‌ನಂಗೆ ಟೈಂ ಪಾಸ್ ಮಾಡಿಕಂಡ್ ಇದ್ದೆ. ಯಾವ್ದೋ ಫ್ರೆಂಡ್ ರಿಕ್ವೆಷ್ಟ್ ಬಂದಿರ್ದು ಕಂಡತ್, ಹಂಗೆ ನೋಡ್ರೆ ಯಾವ್ದೋ ಪೊರ್ಲುನ ಗೂಡೆ!! ಓಹ್!! ಇದ್ ಅವ್ಳೆ ಅಲಾ ಅಂದ್ ಮದುವೆಲಿ ನನ್ನ ಮನ್ಸ್ ನ ಕದ್ದವ್ಳತ ಮತ್ತೊಮೆ ನೋಡ್ದೆ.. ಹೌದು ಅದ್ ಅವ್ಳನೇ! ಅವಳ ಸ್ನೇಹ ಕೋರಿಕೆನ ನಾನ್ ಸಮ್ಮತಿಸಿದೆ, ಹಂಗೆ ಶುರು ಆದ ಮಾತ್, ಪರಿಚಯಕ್ಕೆ ತಿರ್‍ಗಿ, ಪರಿಚಯ ಸ್ನೇಹಕ್ಕೆ, ಸ್ನೇಹ ಪ್ರೀತಿಗೆ ತಿರ್‍ಗಿತ್.. ಇದ್ಕೇ ಹೇಳ್ದು ಕಂಡದೆ "ಪ್ರೀತಿ ಕುರುಡು"ತ..!

ಹಿಂಗೆ ನಾವಿಬ್ಬರೂ ಎಲ್ಲಾ ಪ್ರೇಮಿಗಳಂಗೆ ಪಾರ್ಕ್, ಮಾಲ್ ತ ಎಲ್ಲಾ ಸುತ್ತಾಡಿಕಂಡ್ ಇದ್ದೊ.. ಒಂದ್ ದಿನ ನಾವು ಹಿಂಗೆ ಸುತ್ತುದರ ಅವಳ ಕಡೆವ್ ಯಾರೋ ನೋಡಿ ಗೂಡೆದ್ ಅಪ್ಪಂಗೆ ಈ ನಮ್ಮ ಸುತ್ತಾಟದ ಸುದ್ದಿನ ಮುಟ್ಟಿಸಿದೊ. ಅಂಡ್ಕಂಡಂಗೆ ಅವಳ ಮನೆಕಡೆಂದ ಬುಲಾವ್ ಬಾತ್.. ಮನೆಂಗೆ ಬಂದ್ ಮಾತಾಡಿಕೆತ. ನಾನ್ ಹೆದರಿಕಂಡೇ ಮನೆಗೆ ಹೋದೆ. ಅದ್ ಒಂದ್ ಭಾರೀ ಲಾಯ್ಕ್‌ನ ಬಂಗಲೆ, ಪೊರ್ಲುಲಿ ಜೋಡ್ಸಿ ಇಸಿದ ದುಬಾರಿ ಕುರ್ಚಿ, ಸೋಫಾ ಎಲ್ಲಾ ಇತ್ತ್. ದೊಡ್ಡದಾಗಿದ್ದ ಎಲ್.ಇ.ಡಿ ಟಿವಿ ಗೋಡೆಗೆ ಇತ್ತ್. ಹಂಗೆ ಮನೆ ಮೂಲೆ ಮೂಲೆನ ನೋಡಿಕಂಡ್ ಇರ್‍ಕಾಕನ ಯಾರೋ ಬಂದ ಸದ್ದ್ ಕೇಳಿ ಅತ್ತ ತಿರ್‍ಗಿದೆ. ಮೆಟ್ಲ್ ಇಳ್ಕಂಡ್ ಗೂಡೆನ ಅಪ್ಪ ಇಳ್ಕಂಡ್ ಬರ್‍ತಾ ಒಳೊ. (ಸುರುಗೇ ಅವ್ಳ್ ಫಟ ತೋರ್‍ಸಿದರ್‌ಂದ ಅದ್ ಅವಳ ಅಪ್ಪ ತ ಗುರ್‍ತು ಹಿಡಿಯಕೆ ಸುಲ್‌ಬ ಆತ್) ಎದೆ ಢವ ಢವತ ಬಡ್ಕಣಿಕೆ ಸುರು ಆತ್. ಬಂದ್ ನಮ್ಮಿಬ್ಬರ ಪ್ರೀತಿ–ಪ್ರೇಮದ ವಿಷಯನ್ನೆಲ್ಲಾ ಕೇಳಿ ಒಂದರ್ಧ ಘಂಟೆ ಗ್ಯಾನ ಮಾಡಿ, ನಮ್ಮಿಬ್ಬರ ಮೊದುವೆ ಮಾಡಿವೆ, ನಿಂಗೆ ಒಪ್ಪಿಗೆ ಉಟ್ಟಲಾ ತ ಕೇಳ್ಕನ, ನಾನ್ "ರೋಗಿ ಬಯ್ಸಿದ್ ಹಾಲ್ ಅನ್ನ, ವೈದರ್ ಹೇಳ್ದ್ ಹಾಲ್ ಅನ್ನ" ತ ಮನ್ಸ್‌ಲೆ ಕುಶಿ ಪಟ್ಟೆ, ಆದರೂ ಮುಜುಗರದ ನಾಟಕ ಆಡಿಕಂಡ್ ನೀವ್ಗೆ ಒಪ್ಪಿಗೆ ಇದ್ದರೆ ಇನ್ನ್ ನನ್ನದ್ ಅಭ್ಯಂತರ ಇಲ್ಲೆತ ಹೇಳ್ದೆ.

ಇದೆಲ್ಲಾ ಆಗಿ 5 ತಿಂಗಕೆ ನಮ್ಮಿಬ್ಬರ ಮೊದುವೆ ಸ ಆಗಿ ಹೋತ್. ಅವಳ್ ಅಪ್ಪಂಗೆ ಒಬ್ಬಳೇ ಮುದ್ದಿನ ಮಗಳಾದರ್‌ಂದ ಅಪ್ಪನ ವ್ಯವಹಾರದ ಉಸ್ತುವಾರಿ ಎಲ್ಲಾ ನನ್ನ ಸುಪರ್ದಿಗೆ ಬಾತ್. ಇದ್ಕೇ ಹೇಳ್ದು ಅಲ "ಬಯಸದೇ ಬಂದ ಭಾಗ್ಯ" ತ. ಹಿಂಗೆ ನಾನ್ ಎಲ್ಲಾ ಉಸ್ತುವಾರಿನ ನೋಡಿಕಂಡ್ ದರ್ಪಲಿ ಇದ್ದೆ. ಐಶ್ವರ್ಯದ ಒಟ್ಟಿಗೆ ನನ್ನೊಳಗೆ ಅಹಂ ಸ ಬಂದ್ ಬುಟ್ಟತ್. ಇದೇ ಇರೊಕು "ಅಲ್ಪಂಗೆ ಐಶ್ವರ್ಯ ಬಾಕನ ಸರಿ ರಾತ್ರಿಲಿ ಕೊಡೆ ಹಿಡ್ದದೆ ಗಡ" ತ ಹೇಳುವೆ ಅಲಾ ಹಂಗೆ.

ಹಿಂಗೆ ನನ್ನದೇ ದರ್ಬಾರ್ ನಡಿತಿತ್ತ್. ಒಮ್ಮೆ ಯಾವುದೋ ವಿಸ್ಯಕ್ಕೆ ಒಬ್ಬ ಕೆಲ್ಸದವನೊಟ್ಟಿಗೆ ಜಗಳ ಮಾಡಿಕಂಡಿರ್ಕನ ನನ್ನ ಸಿಟ್ಟ್, ನನ್ನ ದರ್ಪ, ನನ್ನ ಅಹಂ ದ ಜಾಡ್ಸಿ ಒದ್ದೆ. ಅದ್ ಅಲ್ಲೇ ಇದ್ದ ಪಕ್ಕದ ಮೇಜಿಗೆ ನನ್ನ ಕಾಲ್ ತಾಗಿ ಕಾಲಿಗೆ ಹಂಞ ಬೇನೆ ಆತ್. ಹಂಗೆ ಕಾಳ್ ಉಜ್ಜಿಕಣಿಕೆ ಬಗ್ಗಿದೆ.. ಆಗ ನೋಡ್ರೆ ಸುತ್ತ ಎಲ್ಲಾ ಕತ್ತಲೆ.!! ಓಹ್ ಇಷ್ಟೊತ್ತು ಕಂಡದ್ ಸೊಪ್ನ ರ ಗೊತ್ತಾಗಿ "ಹಾಸಿಗೆ ಇದ್ದಷ್ಟ್ ಕಾಲ್ ಚಾಚಕು" ತ ಮನ್ಸ್‌ಲೇ ಬುದ್ದಿ ಹೇಳಿಕಂಡ್ ಕಂಬ್ಳಿ ಹೊದ್ದ್‌ಕಂಡ್ ಮಲ್ಗಿದೆ.

ಹಿಂಗೆ ನನ್ನದೇ ದರ್ಬಾರ್ ನಡಿತಿತ್ತ್. ಒಮ್ಮೆ ಯಾವುದೋ ವಿಸ್ಯಕ್ಕೆ ಒಬ್ಬ ಕೆಲ್ಸದವನೊಟ್ಟಿಗೆ ಜಗಳ ಮಾಡಿಕಂಡಿರ್ಕನ ನನ್ನ ಸಿಟ್ಟ್, ನನ್ನ ದರ್ಪ, ನನ್ನ ಅಹಂ ದ ಜಾಡ್ಸಿ ಒದ್ದೆ. ಅದ್ ಅಲ್ಲೇ ಇದ್ದ ಪಕ್ಕದ ಮೇಜಿಗೆ ನನ್ನ ಕಾಲ್ ತಾಗಿ ಕಾಲಿಗೆ ಹಂಞ ಬೇನೆ ಆತ್. ಹಂಗೆ ಕಾಳ್ ಉಜ್ಜಿಕಣಿಕೆ ಬಗ್ಗಿದೆ.. ಆಗ ನೋಡ್ರೆ ಸುತ್ತ ಎಲ್ಲಾ ಕತ್ತಲೆ.!! ಓಹ್ ಇಷ್ಟೊತ್ತು ಕಂಡದ್ ಸೊಪ್ನ ರ ಗೊತ್ತಾಗಿ "ಹಾಸಿಗೆ ಇದ್ದಷ್ಟ್ ಕಾಲ್ ಚಾಚಕು" ತ ಮನ್ಸ್‌ಲೇ ಬುದ್ದಿ ಹೇಳಿಕಂಡ್ ಕಂಬ್ಳಿ ಹೊದ್ದ್‌ಕಂಡ್ ಮಲ್ಗಿದೆ.

ಹಳಬರ ಜೋಳಿಗೆ

ಜಯಮ್ಮ ಚೆಟ್ಟಿಮಾಡ ಅವರ ಹಳಬರ ಜೋಳಿಗೆ ಸಂಚಿಕೆಂದ ಆರ್‍ಸಿದ ಕಥಾ ಮಾಲಿಕೆ–10

ಶಾಲಾ ಜೀವನದ ಎರಡ್ ಘಟನೆಗ

(ಚಪ್ಪಲಿ ಮತ್ತು ಪತ್ರ ಪ್ರಸಂಗ)

ಕತೆ ಕೊಟ್ಟವು: ಶ್ರೀಮತಿ ಪುಷ್ಪಾ ಪ್ರಭು

ನಮ್ಮ ತರಗತಿಲಿ ಒಂದು ಜಾಣ ಗೂಡೆ ಇತ್ತ್. ಲೆಕ್ಕಲಿ ಯಾಗೊಳೂ ನೂರಕ್ಕೆ ನೂರು ಅಂಕನ ತಕಂತಾ ಇತ್ತ್. ಒಂದು ಸಲ ಏನಾತೋ ಗೊತ್ಲೆ ಅವಳ್‌ಗೆ ಹತ್ತ್ ಅಂಕ ಕಮ್ಮಿ ಸಿಕ್ಕಿತ್. ಉತ್ತರ ಪತ್ರಿಕೆ ಮನೆಗೆ ಹೋತ್.

ಮಾರ್ನೆ ದಿನ ಅವಳ ಅಪ್ಪ ಶಾಲೆ ಸಮೆಲಿ ಬಂದೊ. ತರಗತಿ ಶಿಕ್ಷಕರ್ಲಿ ಮಾತಾಡಿ ಹಂಞ ಹೊತ್ತ್ ತರಗತಿನ ಬುಟ್ಟು ಕೊಡಕು ತ ಕೇಳಿಕಂಡೊ. ಶಾಲಾ ರಕ್ಷಕ ಶಿಕ್ಷಕ ಸಂಘದ ಸದಸ್ಯರ್ ಮತ್ತೆ ಗಣ್ಯವ್ಯಕ್ತಿ ಆದರ್‌ಂದ ಶಿಕ್ಷಕಿಯರ್ ಒಂದೂ ಮಾತಾಡದೆ ಒಪ್ಪಿಗೆ ಕೊಟ್ಟೊ.

ಗೂಡೆನ ಅಪ್ಪ ಹಂಞ ಹೊತ್ತ್ ಕಳ್ದ್ ಈ ತರಗತಿಯ ನಾಯಕ ಯಾರ್ ತ ಕೇಳ್ದೊ. ಒಬ್ಬ ಹೈದ ಎದ್ದ್ ನಿತ್ತತ್. ಕಡೆಗೆ ಅವನ ಹತ್ರ ಹೋಗಿ ನೀನ್ ಈ ತರಗತಿ ನಾಯಕ ನೀನ್ ಇಂದ್ ನನ್ನ ಮಗಳ್‌ಗೆ ಹಾರಹಾಕಿ ಸನ್ಮಾನ ಮಾಡಕು ತ ಹೇಳಿ ಅವರ ಕೈಲಿದ್ದ ಚೀಲದೊಳಗೆ ಕೈ ಹಾಕಿ ಚಪ್ಪಲಿನ ಕಟ್ಟಿ ಮಾಡ್ದ ಒಂದು ಹಾರನ ತೆಗ್ದೊ. 'ಪ್ರತಿ ಸಲ ಹೆಚ್ಚ್ ಅಂಕ ಗಳ್‌ಸ್ತಾ ಇದ್ದ ಇವಳು ಈ ಸಲ ಇಷ್ಟ್ ಕಮ್ಮಿ ಅಂಕ ಗಳ್ಸುಟು. ಅದ್ಕೆ ಈ ಸನ್ಮಾನ' ತ ಹೇಳ್ದೊ. ತರಗತಿಯ ನಾಯಕ ಎಷ್ಟ್ ಬೇಡ ಹೇಳ್ರೂ ಬುಡದೇ ಅವನ ಕೈಂದ ಒತ್ತಾಯಂದ ಚಪ್ಪಲಿ ಹಾರ ಹಾಕ್ಸಿದೊ.

ಆ ಗೂಡೆ ಬುಡಿ, ಇದನ್ನ ಕಂಡ ಇಡೀ ತರಗತಿನೇ ಅಂಬೆರ್ಪುಲಿ ಮುಳ್ಗಿ ಹೋತ್. ಆ ಗೂಡೆ ಎಷ್ಟ್ ಮರ್‍ಪತ್ ತೇಳ್ರೆ ಸಮಾಧಾನ ಮಾಡಿ ಮಾಡಿ ನಾವ್ಗೇ ಸಾಕಾತ್. ಕಡೆಗೆ ನಾವೂ ಸ ಅವೊಟ್ಟಿಗೆ ಸೇರಿ ಮರ್‍ಪಾತ್. ಅದಾದ ಮೇಲೆ ಆ ಗೂಡೆ ಯಾಗ ಸ ಸುರುನ ಸ್ಥಾನ ಬುಟ್ಟು ಕೊಟ್ಟತ್ಲೆ.

ಬಹುಶಃ ಇಂದೂ ಹೆತ್ತವ್ ಮಕ್ಕಳ ಬಗ್ಗೆ ಹಿಂಗೆ ವರ್ತಿಸಿರೆ ಎಷ್ಟೋ ಮಕ್ಕಳ ಭವಿಷ್ಯ ಒಳ್ಳೆಯದಾಗುತ್ತಿತ್ತೋ ಏನೋ?

ಇನ್ನೊಂದು ಘಟನೆ ಹಿಂಗೆ ಉಟ್ಟು. ಇದು ಅವಳ ಮನೆಲಿ ನಡ್ದದ್. ಮನೆಗೆ ಹಾರ್ಮೋನಿಯಮ್ ಕಲ್ಸಿಕೆ ಒಬ್ಬ ಗುರುಗ ಬರ್‍ತಾ ಇದ್ದೊ. ಆ ಗೂಡೆಗೆ ಹಾರ್ಮೋನಿಯಮ್ ಕಲಿಯಕೆ ಬಾಳ ಕುಸಿ. ಅದೇ ಹೊತ್ತ್‌ಲಿ ಗುರುಗಳ ಅಪ್ಪಂಗೆ ಹುಷಾರಿಲ್ಲದ ಕಾರಣ ಹಂಞ ದಿನ ಬಾಕೆ ಆತ್ಲೆ. ಆದರ್‌ಂದ ಅವು ಆ ಗೂಡೆಗೆ ಒಂದು ಪತ್ರನ ಬರ್‍ದೊ, ಅದರ ಸಾರಾಂಶ ಹಿಂಗೆ ಇತ್ತ್. "ನನ್ನ ತಂದೆಗೆ ಹುಷಾರ್ ಇಲ್ಲೆ, ನಂಗೆ ಇನ್ನ್ ಹಂಞ ದಿನ ಬಾಕೆ ಆಲೆ. ನೀನ್ ನಿನ್ನ ಅಭ್ಯಾಸನ ಬುಡದೇ ಮುಂದುವರ್‍ಸ್, ನಿಂಗೆ ಒಳ್ಳೆಯದಾಗಲಿ" ತ ಇತ್ತ್. ಆದ್ರೆ ಅದನ್ನ ತಂದ ಪೋಸ್ಟ್ ಮೆನ್ ಮಾತ್ರ ಎಲ್ಲರೊಟ್ಟಿಗೂ ಗುರುಗಳು ಆ ಗೂಡೆಗೆ ಪತ್ರ ಬರ್‍ದೊಳೊ. ಅವಿಬ್ಬರಿಗೆ ಪ್ರೀತಿ ಉಟ್ಟು ತ ಸುಳ್ಳು ಸುದ್ದಿನ ಹಬ್ಬಿಸಿದೊ. ಈ ವಿಷಯ ಎಲ್ಲಿವರೆಗೆ ಹೋತ್ ಹೇಳ್ರೆ, ಆ ಗೂಡೆನ ಮನವ್ ಗೂಡೆನ ಕರ್‍ಕಂಡ್ ಹೋಗಿ ಅವಳ್‌ಗೆ ಬೊಂಬಾಯಿಲಿ ಒಬ್ಬ ಹೋಟೆಲ್ ಮಾಣಿಗೆ ಕೊಟ್ಟ್ ಮೊದ್ವೆ ಮಾಡ್ಸೊದೊ. ಇಂತಹ ಘಟನೆಗಳ ಈಗ ನೆನ್ಸಿಕಂಡರೆ ನಂಗೆ ಈಗ ಸ ಕಳವಳ ಆದೆ. ಆ ಕಾಲ ಹಂಗೆ ಇತ್ತ್.

ಅಮ್ಮ–ಪೊಪ್ಪ ಯು ಪೀಪಲ್ ಆರ್ ಗ್ರೇಟ್!!

–ಕೊಕ್ಕಲೇ ಮಾಲಿನಿ ಮುತ್ತಪ್ಪ

ಕಣ್ಣ್‌ಗೆ ಕಾಣ್ವ ಜೀವಂತ ದೇವ್ರುನ ಮರ್ತ್, ಕಣ್ಣಿಗೆ ಕಾಣ್ದೆ ಇರುವ ದೇವ್ರುನ ಹುಡ್ಕಿಕಂಡ್ ಹೋದು ಎಷ್ಟ್ ಸರಿ? ಅಮ್ಮ, ಪೊಪ್ಪ ಮತ್ತೆ ವಿದ್ಯೆಕಲ್ಸಿದಂತಹ ಗುರು ಇವು ನಮ್ಮ ಕಣ್ಣೆದುರ್‌ಗೆ ಕಾಣ್ವ ದೇವರುಗ. ಇವರ್ನೆಲ್ಲ ಬುಟ್ಟ್, ಕಾಣದ ದೇವ್ರುನ ಅಲ್ಲಿ, ಇಲ್ಲಿ ಹುಡ್ಕಿಕಂಡ್ ಹೋದು ಎಷ್ಟರ ಮಟ್ಟಿಗೆ ಸರಿತೇಳಿ ಸಂಸ್ಕೃತ ಸುಭಾಷಿತ ಒಂದ್ ಹೇಳ್ದೆ.

ವಯಸ್ಸ್ ನಾವ್ಗಳ್ನ ತುಂಬಾ ಬದಲಾಯಿಸಿದೆ. ವಯಸ್ಸ್ ಬದ್ಲಾದಂಗೆ ವಯಸ್ಸ್‌ಗೆ ತಕ್ಕಂಗೆ ಹಂಞ ಮನಸ್‌ನೂ ಬದ್ಲಾಕೆ ಸುರು ಆದೆ. ನಾವ್ಗಳ್ನ ಹೆತ್ತ್ ಸಾಂಕಿದ ಅಮ್ಮ–ಪೊಪ್ಪ, ನಾವ್ಗಳ ಇಷ್ಟ–ಕಷ್ಟ, ಬೇಕು ಬೇಡಗಳ್ನ ಪೂರೈಸಿಕಾಕನ ಅವು ನಾವ್ಗೆ ಸಾಕ್ಷಾತ್ ದೇವ್ರಹಾಂಗೆ ಕಂಡವೆ. ಯಾಗ ಅವು ಅದ್ ಮಾಡ್, ಇದ್ ಮಾಡ್, ಅದ್ ಬೇಡ, ಇದ್ ಬೇಕು ತ ಬುದ್ಧಿ ಹೇಳಿಕೆ ಸುರು ಮಾಡುವೆ ಆಗ ನಾವ್ಗೆ ಕಿರಿಕಿರಿ ಅನ್ನಿಕೆ ಸುರು ಆದೆ.

ಈರಣ್ಣ, ಗೌರಕ್ಕ ದಂಪತಿಗಳ ಆರ್ ಮಕ್ಕಳ್ಲಿ ಒಬ್ಬನೇ ಒಬ್ಬ ಮಂಜ ಇವನ ಹೆಸ್ರ್ ಕೂಸಣ್ಣ. ಕೂಸಣ್ಣಂಗೆ ಆರ್ ವರ್ಷ ಆಗಿರ್‌ಕಾಕನ ಅಮ್ಮ ಪೊಪ್ಪನ ಮ್ಯಾಲೆ ಅವಂಗೆ ಬಾಳ ಗೌರವ ಇತ್ತ್. ಅಮ್ಮ ಪೊಪ್ಪಂಗೆ ಎಷ್ಟೆಲ್ಲ ವಿಷಯ ಗೊತ್ತುತ ಆಶ್ಚರ್ಯ ಆದೆ. ಯಾರಾರ್ ಅವಂಗೆ ಹೊಡ್ದರೆ, ಬೈದರೆ ಪೊಪ್ಪಂಗೆ ಹೇಳ್ನೆತ ಹೆದ್ರಿಸಿದೆ.

ಕೂಸಣ್ಣ ಹತ್ತ್ ವರ್ಷಕ್ಕೆ ಕಾಲಿಟ್ಟಾಕನ ಪೊಪ್ಪ, ಅಮ್ಮನ ಮೇಲೆ ಇಟ್ಟ ಗೌರವ ಹಂಞ ಕಮ್ಮಿ ಆಕೆ ಸುರು ಆದೆ. ಅಮ್ಮ ಪೊಪ್ಪನ, ಯಾಕೆ ಹಿಂಗೆ ನೀವ್ ಸುಮ್ಮ ಸುಮ್ಮನೆ ಸಿಟ್ಟ್ ಮಾಡಿಕಂಡರೆತ ದೂರು ಹೇಳಿಕೆ ಸುರು ಮಾಡ್ದೆ ಇಂವ.

ಕೂಸಣ್ಣಂಗೆ ಹನ್ನೆರಡ್ ವರ್ಷ ಆಗ್ತಿದಂಗೆ ಅಮ್ಮ, ಪೊಪ್ಪ ಈಗ ಮೊದ್ಲತರ ಇಲ್ಲೆ. ಅವು ನನ್ನ ಪ್ರೀತಿ ಮಾಡ್ದು ತುಂಬಾನೇ ಕಮ್ಮಿಯಾಗುಟುತ ಅನ್ನಿದೆ. ಅವು ತುಂಬಾನೇ ಬದ್ಲಾಗಳೋತ ಅಮ್ಮ ಪೊಪ್ಪನ ಮೇಲೆ ಆರೋಪ ಹೊರ್ಸಿಕೆ ಸುರು ಮಾಡ್ದೆ ಕೂಸಣ್ಣ.

ಕೂಸಣ್ಣಂಗೆ ಹದಿನಾರ್‌ನೇ ವಯಸ್ಸಾಗ್ತಿದಂಗೆ ಈರಣ್ಣ, ಗೌರಕ್ಕ ಇವಂಗೆ ದೊಡ್ಡ ತಲೆಬೇನೆಯಾಗಿ ಕಂಡದೆ. ನಾ ಏನ್ ಮಾಡ್ರು ಅಮ್ಮ ಪೊಪ್ಪಂಗೆ ಇಷ್ಟ ಆಲೆ. ಎಲ್ಲಕೂ ಒಂದಲ್ಲ ಒಂದ್ ಹೇಳ್ವೆತ ಅವ್ರ ಮೇಲೆ ಕೂಸಣ್ಣ ತಪ್ಪು ಹೊರ್ಸಿಕೆ ಸುರು ಮಾಡ್ದೆ.

ಕೂಸಣ್ಣಂಗೆ ಹತ್ತೊಂಬತ್ತ್ ವರ್ಷ ಆಕನ, ತನ್ನ ಪ್ರೀತಿಸಿ ಕೈ ತುತ್ತು ಕೊಟ್ಟ ಅಮ್ಮ ಪೊಪ್ಪನ ಹಕ್ಕಲೇ ಜಗಳ ಮಾಡಿಕೆ ಸುರು ಮಾಡ್ದೆ.

ಕೂಸಣ್ಣಂಗೆ ಇಪ್ಪತ್ತೊಂದು ವರ್ಷ ಆಗ್ತಿದ್ದಂಗೆ ಅಮ್ಮ ಪೊಪ್ಪ ತುಂಬಾ ಹಿಡ್ತಲಿ ಇಸಿಕಣಿಕೆ ನೋಡುವೆ. ಎಲ್ಲಿಗೆ ಹೋಗಿದ್ದ? ಮನೆಗೆ ಬಾಕೆ ಯಾಕೆ ಇಷ್ಟ್ ತಡ ಆತ್? ತ ಕೇಳ್ಕನ ಎಲ್ಲ. ಯಾಕೆ ಇವು ಹಿಂಗೆ ಮಾಡುವೆ ತ ಅನ್ನಿಕೆ ಸುರು ಆತ್. ಇವು ಮಾಡ್ದ ಸಂಪತ್ತ್ ನಂಗೆ ಅಲ್ಲದೆ ಬೇರೆ ಇನ್ಯಾರಿಗೆ? ಯಾಕೆ ಇವು ಹಿಂಗೆ ತ ಪ್ರಶ್ನೆಗ ಅವನಲ್ಲಿ ಹುಟ್ಟಿಕಂಡದೆ.

ಇನ್ನ್ ಇಪ್ಪತ್ತೈದ್ ವರ್ಷ ಆಕನ ಅಮ್ಮ ಪೊಪ್ಪ ನೀವ್ಗೆ ಎಂತ ಗೊತ್ತು. ನೀವ್ಗಿಂತ ನಾನ್ ಹೆಚ್ಚ್ ಕಂಡೊಳೆ ತ ನೀವಿನ್ನೂ ಆ ಕಾಲಲೇ ಒಳ್ರಿ. ನೀವ್ ಹೇಳ್ದು ಹಂಞನೂ ಸರಿ ಇಲ್ಲೆ ತ ಹೇಳಿಕೆ ಸುರು ಮಾಡ್ದೆ.

ಮೂವತ್ತ್ ವರ್ಷ ಆಕಂಡ್ ಬಾಕನ ಕಂಕಣ ಬಲ ಕೂಡಿ ಬಂದದೆ. ಅಮ್ಮ ಪೊಪ್ಪ ಒಂದ್ ಪೊರ್ಲುನ ಗೂಡೆನ ನೋಡಿ ಮೊದ್ವೆ ಮಾಡ್ಸುವೆ. ಹೊಸದರ್ಲಿ ಹಕ್ಕಲೆನೇ ಜೀವನ ಮಾಡಿಕಂಡ್ ಖುಷಿಲಿ ಇದ್ದವೆ. ದಿನಗ ಕಳ್ದಂಗೆ, ಅಮ್ಮ ಪೊಪ್ಪನ ಮಾತ್‌ಗ, ಕೂಸಣ್ಣ ಮತ್ತೆ ಅವನ ಹೆಣ್ಣ್‌ಗೆ ಹೊಂದಿಕೆ ಆದುಲೆ. ಅಮ್ಮ ಪೊಪ್ಪ ಒಂದ್ ತರತ ಮಂಜ ಸೊಸೆಂದ ಮಾತ್ ಬಂದದೆ. ವಯಸ್ಸಾದವ್ರಂದ ದೂರಾನೇ ಇದ್ದರೆ ಒಳ್ಳದ್‌ತ ಮಂಜ ಸೊಸೆ ಯೋಚಿಸುವೆ. ಹಂಗೆ ಮಂಜನ ಸಂಸಾರ ಬೇರೆ ಮನೆಲಿ ವಾಸಿಸಿಕೆ ಸುರು ಮಾಡುವೆ. ಮಕ್ಕ ಯಾಕೆ ಬಾಡಿಗೆ ಮನೆಲಿ ಇರೊಕು ತ ನೆನ್ಸಿ ಈರಣ್ಣ ಮತ್ತೆ ಗೌರಕ್ಕ ತಾವು ಇದ್ದ ಮನೆನ ಬುಟ್ಟ್ ಕೊಟ್ಟ್ ಇಬ್ಬರೂ ವೃದ್ಧಾಶ್ರಮ ಸೇರುವೆ.

ಇತ್ತ ಕೂಸಣ್ಣಂಗೆ ಮಕ್ಕಳ ರಂಪಾಟ, ಕಿರ್ಚಾಟ ಕೇಳಿ ಸುಸ್ತಾಗಿ, ತಲೆಕೆಟ್ಟ್ ಹೋದಂಗೆ ಆಗಿದ್ದದೆ. ಮಕ್ಕ ದೊಡ್ಡವ್ ಆಗ್ತಾ ಇದ್ದಂಗೆ ಕೂಸಣ್ಣ ತನ್ನ ಮಕ್ಕಳ್‌ಗೆ ತನ್ನ ಪೊಪ್ಪ ಅಮ್ಮನಾಂಗೆ ಶಿಸ್ತ್‌ನ ಪಾಟ ಹೇಳಿಕೆ ಸುರು ಮಾಡ್ದೆ. ಆಗ ಕೂಸಣ್ಣಂಗೆ ತನ್ನ ಅಪ್ಪ ಅಮ್ಮನ ನೆನ್ಪಾದೆ. ಅವು ಮನೆಂದ ವೃದ್ಧಾಶ್ರಮಕ್ಕೆ ಸೇರ್ದ್ ಮತ್ತೆ ಮತ್ತೆ ಕನ್ಸ್‌ಲಿ ಬಾಕೆ ಸುರಾದೆ.

ಕೂಸಣ್ಣಂಗೆ ಈಗ ನಲ್ವತ್ತೆರಡ್ ವರ್ಷ. ತನ್ನ ಅಮ್ಮ ಪೊಪ್ಪನಾಂಗೆ ಬಿಗಿ ಆಗದೇ ಹೋದರೆ ಮಕ್ಕಳ ವಿಷಯಲಿ, ನನ್ನ ಮಾತ್ ಕೇಳಿಕಿಲೆ. "ಗಿಡ ಆಕನ ಬಗ್ಗದ್ ಇನ್ನ್ ಮರ ಆಕನ ಬಗ್ಗಿದೆನಾ" ತೇಳಿ ಮಕ್ಕಳ ಮೇಲೆ ಇನ್ನಷ್ಟ್ ಗಮನ ಹರ್ಸಿಕೆ ಸುರು ಮಾಡ್ದೆ. ಮಕ್ಕಳ ಸಾಂಕಿಕೆ, ಅವ್ಕೆ ವಿದ್ಯಾಭ್ಯಾಸ ಕೊಡ್ಸಿಕೆ ಎಷ್ಟ್ ಕಷ್ಟ ಪಡಕು ತ ಗೊತ್ತಾಕೆ ಸುರು ಆದೆ. ತನ್ನ ಅಮ್ಮ ಪೊಪ್ಪ ನನ್ನ ಸಾಂಕಿಕೆ ವಿದ್ಯಾಭ್ಯಾಸ ಕೊಡ್ಸಿಕೆ ಎಷ್ಟ್ ಕಷ್ಟ ಪಟ್ಟೊಳೊ ತ ನೆನ್ಸಿಕಂಡ್ ಕಣ್ಣ್‌ಲಿ ನೀರ್ ಬಾಕೆ ಸುರಾದೆ. ಅಮ್ಮ ಪೊಪ್ಪನ ಬಗ್ಗೆ ಅಯ್ಯೋ ಅನ್ನಿದೆ. ಆಗ ಕಾಲ ಮಿಂಚಿ ಹೋಗಿದ್ದದೆ.

ಇನ್ನ್ ವಯಸ್ಸಾದಂಗೆ ನಂಗೇ ಈ ಎರಡ್ ಮಕ್ಕಳ ಸಾಂಕಿಕೆ ಇಷ್ಟ್ ಕಷ್ಟ ಆಗ್ತಾ ಇರ್ಕನ ಅಮ್ಮ ಪೊಪ್ಪ ಅದೆಂಗೆ ಆರ್ ಜನ ಮಕ್ಕಳ ಸಾಂಕಿದೋ ತೇಳ್ದೆ ಅವಂಗೆ ಆಶ್ಚರ್ಯ ಆದೆ. ಹಂಗೆ ಮಕ್ಕ ದೊಡ್ಡವಾದಂಗೆ ಅವರ ಬಾಯಿಂದ ಹೀನಾಯ ಮಾತ್‌ಗಳ ಕೇಳಿ ಆಕಾಶನೇ ತಲೆಮೇಲೆ ಬಿದ್ದಂಗೆ ಆದೆ. ಈಗಂತೂ ಕೂಸಣ್ಣಂಗೆ ತನ್ನ ಅಮ್ಮ ಪೊಪ್ಪನ ನೆನ್ಪು ಬಾಕೆ ಸುರಾದೆ. ಮಕ್ಕಳ ಕಾಟ ತಿಕ್ಕಾಟ ಕೇಳಿಕಾಗದೆ ಎಲ್ಲಿಯಾರ್ ಪೋಯಿ ತ ಅನ್ನಿದೆ.

ಒಂದ್ ದಿನ ಕೂಸಣ್ಣ ಗೋಡೆ ಮೇಲೆ ತೂಗಿ ಹಾಕಿದ್ದ ತನ್ನ ಅಪ್ಪ ಅವ್ವನ ಫೋಟೋಗಳ ಕಂಡ್ ಶಾಂತವಾಗಿ ನೆಗಾಡಿಕಂಡ್ ಕುದ್ದದ್ ನೋಡಿ, ನನ್ನೇ ನೋಡಿಕಂಡ್ ಅಲ ನೀವ್ ನೆಗಾಡ್ದು. ನಿಮ್ಮ ಅರ್ಥ ಮಾಡಿಕಣಿಕೆ ನಂಗೆ ಇಷ್ಟ್ ವರ್ಷ ಬೇಕಾತ್. ನೀವ್ಗಳ ಕಾಳಜಿ ಮಹತ್ವ ತಿಳ್ಕಣಿಕೆ 54 ವರ್ಷ ಬೇಕಾತ್. ಕೂಸಣ್ಣ ಕಣ್ಣೀರ್ ಹಾಕಿಕಂಡ್ ಅಮ್ಮ ಪೊಪ್ಪ ಯೂ ಪೀಪಲ್ ಗ್ರೇಟ್ ತ ಪಶ್ಚಾತಾಪ ಪಟ್ಟದೆ.

ಕಾವೇರಿ ಹೋಂ ಅಪ್ಲೈಯೆನ್ಸಸ್

ಕುಕ್ಕರ್ಸ್



ಮಿಕ್ಸರ್ ಗ್ರೈಂಡರ್ಸ್



ಗ್ಯಾಸ್ ಸ್ಟೌವ್



ಕುಕ್‌ವೇರ್ಸ್



ಸ್ಮಾಲ್ ಅಪ್ಲೈಯೆನ್ಸಸ್



ಸಂಪರ್ಕಿಸಿ :

ಚೀಯಪ್ಪನ ನವೀನ್ / ಚೀಯಪ್ಪನ ಶರತ್

ದೂರವಾಣಿ ಸಂಖ್ಯೆ: +91–8884571075 / +91–8861833243 /080–41228359

Email Id: homeappliances.kaveri@gmail.com

#23/8, ಚಾಮುಂಡೇಶ್ವರಿ ಕಾಂಪ್ಲೆಕ್ಸ್, ಚಾಮುಂಡೇಶ್ವರಿ ಲೇಔಟ್, ಶಾಂತಿನಿಕೇತನ್ ಮುಖ್ಯ ರಸ್ತೆ,
ನಿರಂಜನ್ ಮ್ಯಾಕ್ಸಿಮಾ ಅಪಾರ್ಟ್‌ಮೆಂಟ್ ಎದುರು, ಬಿ.ಜಿ. ರಸ್ತೆ, ಅರೆಕೆರೆ, ಬೆಂಗಳೂರು–560076

* ಅರೆಬಾಸೆ ಮುಡ್ಪು ಪತ್ರಿಕೆನ ಚಂದಾ ಹಣನ ಇಲ್ಲಿ ಸ್ವೀಕರಿಸಲಾದೆ.

ಅರೆಬಾಸೆ ಮುಡ್ಪು

ಅರೆಬಾಸೆ ತಿಂಗ ಪತ್ರಿಕೆ

ಅರೆಬಾಸೆ ಕಲೆ, ಸಾಹಿತ್ಯ, ಸಂಸ್ಕೃತಿಗೊಂದು ಕೈಗನ್ನಡಿ

ಅರೆಬಾಸೆ ಉಳ್ಸಿಕೆ ನಮ್ಮೊಟ್ಟಿಗೆ ಕೈ ಜೋಡ್ಸಿ

ವಾರ್ಷಿಕ ಚಂದಾ ರೂ.300/–

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ 9535615759